ಹಿತ್ತಲ ಗಿಡ

ಚಾತುರ್ಮಾಸಿಕ

"ರೈತ, ವಿಜ್ಞಾನಿ, ವಿದ್ಯಾರ್ಥಿ, ಅಧ್ಯಾಪಕ,
ಸ್ವಯಂ ಸೇವಾ ಸಂಸ್ಥೆ ಮತ್ತು
ಜನಪರ ಸಂಘಟನೆಗಳ ಸಾಮೂಹಿಕ ಪ್ರಯತ್ನ"

ಪೈರು 13, ಕೊಯಿಲು 1, ಜನವರಿ–ಏಪ್ರಿಲ್ 2007



ಸಾಗಾಣಿಕೆಗೊಳಪಟ್ಟಿರುವ ಜೀವ ವೈವಿಧ್ಯ ವರದಿ ಬಿಡುಗಡೆ



ಈ ಸಂಚಿಕೆಯಲ್ಲಿ

ಜನರಿಗೆ ಪ್ರತಿಫಲ ನೀಡುವಂತಹ ತಂತ್ರಜ್ಞಾನ, ಸಂಸ್ಥೆ ಮತ್ತು ಮೌಲ್ಯಗಳನ್ನು ಹುಟ್ಟು ಹಾಕುವ ಪ್ರಯತ್ನ

ದೇಶೀಯ ಜ್ಞಾನ, ತಂತ್ರಜ್ಞಾನ ಮತ್ತು ಸಂಸ್ಥೆಗಳು, ತಳಮಟ್ಟದ ಅನುಶೋಧನೆ, ಸ್ಥಳೀಯ ಸಂಪನ್ಮೂಲ, ಜೀವ ವಿವಿಧತೆ ಮತ್ತು ಪಾರಂಪರಿಕ ಆಹಾರ ಇವುಗಳ ಮೂಲಕ ಸುಸ್ಥಿರ ಕೃಷಿ ಅಭಿವೃದ್ಧಿ ಮೇಲಿನ ಚರ್ಚೆಗೆ ಮೀಸಲಾದ ಪತ್ರಿಕೆ

ಹಿತ್ತಲ ಗಿಡದ ಪೋಷಣೆಗೆ ಸಹಾಯ:

PRITVI (People Rewarding Initiatives in Technology Values & Institutions), Bangalore, **SRISTI** (Society for Research and Initiatives for Sustainable Technologies and Institutions), & **NIF** (National Innovation Foundation, India), Ahmedabad

ಸಂಪಾದಕೀಯ

❖ ಈ ಸಂಚಿಕೆಯಲ್ಲಿ ಕಾಳು ಮೆಣಸಿನ ಸೊರಗು ರೋಗಕ್ಕೆ ಪರಿಹಾರವಾಗಿ ಪ್ರತಿರೋಧವಿರುವ ಎರಡು ನೂತನ ತಳಿಗಳನ್ನೇ ಸೃಷ್ಟಿಸಿರುವ ಇಬ್ಬರು ತಳಮಟ್ಟದ ತಳಿ ಅಭಿವೃದ್ಧಿಕಾರರ ಅನುಶೋಧನೆಗಳನ್ನು ಕೊಡಲಾಗಿದೆ. ಕೃಷಿಗೆ ಸಂಬಂದಿಸಿದಂತೆ ಎಲ್ಲಾ ಪ್ರಕಾರಗಳ ತಳಮಟ್ಟದ ಅನುಶೋಧನೆಗಳನ್ನು ಹಿತ್ತಲಗಿಡದಲ್ಲಿ ದಾಖಲು ಮಾಡಲಾಗಿತ್ತು. ಆದರೆ ಈ ತಳಿ ಅಭಿವೃದ್ಧಿ ವಿಚಾರ ಹೆಚ್ಚು ಗಮನಕ್ಕೆ ಬಂದಿರಲಿಲ್ಲ. ರೈತರ ಸಮೂಹವೇ ನೈಜ ಬೀಜ ಸಂರಕ್ಷಕರು ಮತ್ತು ತಳಿ ಅಭಿವೃದ್ಧಿಕಾರರು. ಈ ನಿಟ್ಟಿನಲ್ಲಿ ದಾಖಲಾತಿ ಮಾಡುವ ಬಗ್ಗೆ ಹಿತ್ತಗಿಡ ಹೆಚ್ಚು ಗಮನ ಹರಿಸಲಿದೆ.

❖ ಮಲೆನಾಡ 'ರೈತವಿಜ್ಞಾನಿ' ಪ್ರಗತಿಪರ ರೈತರಾದ ಅಗಲಿ ನಾಗೇಶ್‌ರವರು ಅಹಮದಾಬಾದಿನ ಆಹಾರೋತ್ಸವದ ಬಗ್ಗೆ ತಮ್ಮ ಅನುಭವ ಮತ್ತು ಅಭಿಪ್ರಾಯವನ್ನು ಹಂಚಿಕೊಂಡ ಲೇಖನ ಕೊಡಲಾಗಿದೆ. ಇಂತಹ ಆಹಾರೋತ್ಸವ ರಾಜ್ಯದ ಮೂಲೆಮೂಲೆಯಲ್ಲೂ ನಡೆಯುವಂತಾಗಲೆಂದು ಹಿತ್ತಲಗಿಡ ಹಾರೈಸುತ್ತದೆ.

❖ ಈ ಸಂಚಿಕೆಯಲ್ಲಿ ಸರ್ವೋದಯ ಕೃಷಿಕ ಚೇರ್ಕಾಡಿ ರಾಮಚಂದ್ರರಾಯರು, ವೈವಿಧ್ಯಮಯ ಕೃಷಿ ಉದ್ದಿಮೆಗಳ ಮೋನಪ್ಪ ಕರ್ಕೇರ ಮತ್ತು ಕೃಷಿ ಯಂತ್ರ ತಂತ್ರಗಳ ಅನುಶೋಧಕ ಸಾಗರದ ಶ್ರೀಪಾದರಾಯರ ಬಗ್ಗೆ ಲೇಖನ ಕೊಡಲಾಗಿದೆ. ಗ್ರಾಮೀಣ ಬದುಕಿನಲ್ಲಿ ಸಾರ್ಥಕತೆ ಸಾಧಿಸಲು ಮೂರು ದಾರಿಗಳನ್ನು ಇವರು ತೆರೆದಿಟ್ಟಿರುವರು ಎಂದರೆ ತಪ್ಪಾಗಲಾರದು.

❖ ಪುಕುವೋಕರ ನೈಸರ್ಗಿಕ ಕೃಷಿ ಪದ್ಧತಿ, ಗಾಂಧೀಜಿಯ ಸ್ವಾವಲಂಬನೆ ದೃಷ್ಟಿಕೋನ ಇವೆರಡನ್ನು ಸಮನ್ವಯಗೊಳಿಸಿ ಸಾಧಿಸಿದ ಯಶಸ್ವಿ ಕೃಷಿ ಪದ್ಧತಿ ರಾಮಚಂದ್ರರಾಯರದ್ದು. ಇವರ ಕೃಷಿ, ಬದುಕು ಆದರ್ಶಗಳನ್ನೆಲ್ಲಾ ಸಂಗ್ರಹಿಸಿ ಅವರ ಪುತ್ರ ಮಂಜುನಾಥ್ ರಾವ್ ಒಂದು ಪುಸ್ತಕ ರೂಪದಲ್ಲಿ ತೆರೆದಿಟ್ಟಿರುವರು. ಪುತ್ತೂರಿನ ಮೋನಪ್ಪನವರು ಕೃಷಿ ಮತ್ತು ಕೃಷಿ ಆಧಾರಿತ ಗ್ರಾಮೀಣ ವೈವಿಧ್ಯ ಉದ್ದಿಮೆಗಳ ವಿಚಾರದಲ್ಲಿ ಎಲ್ಲಾ ಸಾಧ್ಯತೆಗಳನ್ನು ಪ್ರಯೋಗಿಸುತ್ತಿರುವರು. ತಮ್ಮ ಉತ್ಪನ್ನಗಳಿಗೆ ಮಧ್ಯವರ್ತಿಗಳನ್ನು ದೂರವಿಟ್ಟು ಪರ್ಯಾಯ ಮಾರುಕಟ್ಟೆ ವ್ಯವಸ್ಥೆಯನ್ನು ಸ್ವಯಂ ತಾವೇ ನಿರ್ಮಿಸಿಕೊಂಡಿರುವರು. ಇನ್ನು ಸಾಗರದ ಶ್ರೀಪಾದರಾಯರು ಹೊಸ ಹೊಸ ಯಂತ್ರ, ತಂತ್ರಗಳನ್ನು ಸ್ವತಃ ಅನುಶೋಧನೆ ಮಾಡಿ ಕೃಷಿ ತಂತ್ರಜ್ಞಾನದ ಬಾವುಟವನ್ನು ತಮ್ಮ ಮನೆಯಲ್ಲೇ ಹಾರಿಸಿರುವರು. ಮುಖ್ಯವಾಗಿ ಈ ಮೂವರು ತಮ್ಮ ಮಣ್ಣು, ನೀರು, ಜೀವವೈವಿಧ್ಯ ಇತ್ಯಾದಿ ಸಂಪನ್ಮೂಲಗಳ ಸಂರಕ್ಷಣೆ ಬಗ್ಗೆ ವಿಶೇಷ ಮಹತ್ವ ನೀಡಿರುವರು.

(ಹೀಗೆ ಕ್ರಮವಾಗಿ ಆದರ್ಶ, ವೈವಿಧ್ಯ, ಮಾರುಕಟ್ಟೆ ಮತ್ತು ತಂತ್ರಜ್ಞಾನಗಳ ಮೂಲಕ ಬರಿದೇ ಸಾರ್ಥಕತೆ ಮಾತ್ರವಲ್ಲ ; ಸಂತೃಪ್ತಿ ಹಾಗೂ ಯಶಸ್ವಿ ಕೃಷಿ ಬದುಕಿನ ರೀತಿಯನ್ನು ಕಂಡುಕೊಳ್ಳುವಲ್ಲಿ ಈ ಮೂವರು ಯಶಸ್ವಿಯಾಗಿರುವರು.) ಇಂದು ದೇಶದಾದ್ಯಂತ ಕೃಷಿವಲಯದ ಬಿಕ್ಕಟ್ಟಿನಿಂದ ಹತಾಶರಾದ ರೈತರು ಆತ್ಮಹತ್ಯೆ ದಾರಿಗಿಳಿಯುತ್ತಿರುವುದು ದಿನನಿತ್ಯ ವರದಿಯಾಗುತ್ತಿದೆ. ಇದನ್ನು ತಡೆಯಲು ಸರ್ಕಾರ ಸಾವಿರಾರು ಕೋಟಿ ರೂಪಾಯಿಗಳನ್ನು ಸುರಿಯಲು ಮುಂದಾಗಿದ್ದರೂ ಪರಿಣಾಮ ಗೋಚರಿಸದಾಗಿದೆ. ಆತ್ಮಹತ್ಯೆಯನ್ನು ಬರಿದೆ ಹಣದಿಂದ ತಡೆಗಟ್ಟಲು ಸಾಧ್ಯವಿಲ್ಲ. ಇದಕ್ಕೆ ಜೀವನಾದರ್ಶ, ಆದಾಯದ ಭದ್ರತೆಗೆ ವೈವಿಧ್ಯಮಯ ಕೃಷಿ, ಶೋಷಣೆ ರಹಿತ ಮಾರಾಟ ವ್ಯವಸ್ಥೆ, ಯೋಗ್ಯ ತಂತ್ರಜ್ಞಾನ, ಮಿಗಿಲಾಗಿ ನೈಸರ್ಗಿಕ ಸಂಪನ್ಮೂಲಗಳ ಸುಸ್ಥಿರ ಬಳಕೆ ಇವೆಲ್ಲಾ ಅತ್ಯಗತ್ಯ. ಇವೆಲ್ಲವುಗಳತ್ತ ಸರ್ಕಾರ ಯಾಂತ್ರಿಕವಾಗಿ ನೋಡುವ ಬದಲು, ಸಾರ್ಥಕವೂ, ಯಶಸ್ವಿಯೂ ಆದ ಬದುಕಿನ ರೀತಿಯನ್ನು ರೂಪಿಸಿಕೊಂಡಿರುವ ಇಂತಹ ರೈತರ ಜೀವನ ಸಾರವನ್ನು ಸಂದೇಶ ರೂಪದಲ್ಲಿ ನಮ್ಮ ರೈತ ಸಮೂಹದತ್ತ ತಲುಪಿಸುವ ಬಗೆ ಹೇಗೆಂದು ಯೋಚಿಸಬೇಕಾಗಿದೆ.

ಡಾ। ಪ್ರಕಾಶ್ ಕಮ್ಮರಡಿ

ಗಜ್ಜರಿ (ಕ್ಯಾರೆಟ್) ಈರುಳ್ಳಿ ಜೊತೆ ಬೆಳೆ

ಮನುಷ್ಯರಂತೆ ಸಸ್ಯಗಳೂ ಜೊತೆಜೊತೆಯಾಗಿ ಬಾಳಿ ಬದುಕಲು ಇಷ್ಟಪಡುತ್ತವೆ. ಉದಾಹರಣೆಗೆ ಗಜ್ಜರಿ ಬೆಳೆ ಟೊಮೆಟೋ ಜೊತೆಗೆ ಆನಂದ ದಿಂದ ಜೊತೆಗೂಡಿ ಬದುಕುವುದು ಮಾತ್ರವಲ್ಲ ಅಧಿಕ ಇಳುವರಿ ಕೂಡ ಕೊಡುತ್ತವೆಯಂತೆ. ಈ ಸತ್ಯವನ್ನು ಲೂಯಿಸ್ ರಿಯೊಟ್ ಎಂಬ ವಿಜ್ಞಾನಿ 1986 ರಲ್ಲಿ ಪ್ರಕಟವಾದ *Carrots Love Tomatoes : Secrets of Companion Planting for Successful Gardening* ಎಂಬ ತನ್ನ ಪುಸ್ತಕದಲ್ಲಿ ವಿವರಿಸಿರುವರು. ಇದೇ ಸತ್ಯದ ಆಧಾರದ ಮೇಲೆ ಹನಿಬೀ 2006ರ ಸಂಚಿಕೆಯಲ್ಲಿ ಒಂದು ಸಹಬೆಳೆ ಪದ್ಧತಿಯನ್ನು ಪ್ರಕಟಿಸಲಾಗಿದೆ.

ಹೆಚ್ಚಿನ ಇಳುವರಿ ಮತ್ತು ಬೀಜೋತ್ಪಾದನೆಗಾಗಿ ಈರುಳ್ಳಿಯನ್ನು ಗಜ್ಜರಿ ಬೆಳೆಯ ಜೊತೆಗೆ ಅಂತರ ಬೆಳೆಯಾಗಿ ಬೆಳೆಯಬಹುದಂತೆ. ಈ ಎರಡು ಪ್ರಭೇದಗಳು ಏಕ ಕಾಲಕ್ಕೆ ಹೂ ಬಿಡುವುದರಿಂದ ಹೂವಿನಿಂದ ತುಂಬಿದ ತೋಟ ಹೆಚ್ಚು ಪರಾಗಸ್ಪರ್ಶ ಮಾಡಬಲ್ಲ ದುಂಬಿಗಳನ್ನು ಆಕರ್ಷಿಸುತ್ತದೆ. ಇದರಿಂದ ಈ ಎರಡೂ ಬೆಳೆಯಲ್ಲಿ ಅಧಿಕ ಉತ್ಪಾದನೆ ಕಾಣಬಹುದಂತೆ.

ಮೂಲ: ಹನಿಬೀ, VOL 17(3), ಸೆಪ್ಟೆಂಬರ್ 2006, ಪುಟ 16

ಮಲ್ಲಿಗೆ ಗಿಡ ಸವರುವಿಕೆಗೆ ಕುರಿಗಳ ಬಳಕೆ

ಆಂಧ್ರದ ಕಡಪ ಜಿಲ್ಲೆಯಲ್ಲಿ ಮಲ್ಲಿಗೆ ಹೂ ಅರಳುವ ಕಾಲ ಮುಗಿದ ಬಳಿಕ ಅಂದರೆ ನವೆಂಬರ್ ತಿಂಗಳಿನಲ್ಲಿ ಗಿಡಗಳನ್ನು ಬಾಡಿಸಿ, ನಂತರ ತುದಿಯ ಮೊಗ್ಗುಗಳನ್ನು ಸವರುವಿಕೆಯ *(pruning)* ಮೂಲಕ ತೆಗೆಯುತ್ತಾರೆ. ಇದಕ್ಕಾಗಿ ರಸಾಯನಿಕಗಳನ್ನು ಉಪಯೋಗಿಸುವುದರಿಂದ ಎಲೆಗಳು ಉದುರುತ್ತವೆ ಮತ್ತು ಇದು ವೆಚ್ಚದಾಯಕ ಹಾಗೂ ಗಿಡಗಳ ಸಾವಿಗೂ ಕಾರಣವಾಗುತ್ತದೆ. ಆದರೆ ಇಲ್ಲಿನ ರೈತರು ಗಿಡದ ಎಲೆಗಳ ಸವರುವಿಕೆಗೆ, ಕುರಿಗಳನ್ನು ಮಲ್ಲಿಗೆ ಕೃಷಿ ತೋಟದಲ್ಲಿ ಮೇಯಲು ಬಿಟ್ಟು ಎಲೆಗಳನ್ನು ಕುರಿಗಳು ತಿನ್ನುವುದರ ಮೂಲಕ ಹೆಚ್ಚಿನ ಇಳುವರಿಯನ್ನು ಸರಳವಾಗಿ, ವೆಚ್ಚವಿಲ್ಲದೇ ಪಡೆಯುತ್ತಿದ್ದಾರೆ.

ಮೂಲ: ಹನಿಬೀ, VOL 17(3) , ಸೆಪ್ಟೆಂಬರ್ 2006, ಪುಟ 13.

ಶ್ರೀಪಾದರಾಯರ ಸೈಕಲ್ ಕಡ್ಡಿ ಪೊರಕೆ


ಸಾಮಾನ್ಯವಾಗಿ ಮಲೆನಾಡಿನಲ್ಲಿ ಗೊಬ್ಬರ ತಯಾರಿಸಲು ಕಾಡಿನಮರದ ಕೆಳಗೆ ಬಿದ್ದ ಒಣ ಎಲೆಯನ್ನು ಒಂದೆಡೆ ರಾಶಿ ಮಾಡುತ್ತಾರೆ. ಇದಕ್ಕಾಗಿ ಸಾಮಾನ್ಯವಾಗಿ ಮನೆ ಬಳಕೆಯ ಪೊರಕೆ ಉಪಯೋಗಿಸುತ್ತಾರೆ. ಇದರಲ್ಲಿ ಉಪಯೋಗಿಸಲ್ಪಡುವ ಶ್ರಮ ಮತ್ತು ಸಮಯ ಹೆಚ್ಚಾಗಿರುತ್ತದೆ. ಅಲ್ಲದೆ ಸತತ ಬಳಸುವುದರಿಂದ ಆ ಪೊರಕೆಯ ಬಾಳಿಕೆ ಕಡಿಮೆಯಾಗುತ್ತದೆ. ಹಾಗಾಗಿ ಇದಕ್ಕೆ ಪರಿಹಾರವಾಗಿ ಒಂದು ಸಾಧನವನ್ನು ಶಿವಮೊಗ್ಗ ಜಿಲ್ಲೆ ಸಾಗರ ತಾಲೂಕು ಎಡಜಿಗಳೆಮನೆ ಮಾವಿನಸರ ಗ್ರಾಮದ ಪ್ರಗತಿಪರ ರೈತರಾದ ಎಂ.ಜಿ. ಶ್ರೀಪಾದರಾಯರು ಕಂಡುಕೊಂಡಿರುವರು. ಇವರು ಉದ್ದಕ್ಕೆ ತಕ್ಕಂತೆ ಹಗುರವಾದ ಬಿದಿರು ಹಿಡಿಕೆಗೆ ಸೈಕಲ್ ಚಕ್ರದ ತಂತಿಗಳನ್ನು ಪೊರಕೆಯಾಕಾರ ದಲ್ಲಿ ಬಿಗಿಗೊಳಿಸಿದ್ದಾರೆ. ಇದು ಹೆಚ್ಚು ಬಾಳಿಕೆ ಹಾಗೂ ಹಗುರ ಎನ್ನುತ್ತಾರೆ. ಇದಲ್ಲದೆ ದನದ ಕೊಟ್ಟಿಗೆಯನ್ನು ಸ್ವಚ್ಛಗೊಳಿಸಲು ಹಾಗೂ ಮನೆಯ ಸುತ್ತ ಮುತ್ತ ಕಸಕಡ್ಡಿ ತೆಗೆಯಲು ಸಹಕಾರಿ ಎನ್ನುವರು ಶ್ರೀಪಾದರಾಯರು.

ಪ್ರಾಣಿ ಪಕ್ಷಿ ಹತೋಟಿ

ದಂಶಕಗಳಾದ ಇಲಿಗಳು ಜೋಳ, ನೆಲಗಡಲೆ ಮೊದಲಾದ ಬೆಳೆಗಳನ್ನು ತಿಂದು ಹಾಳು ಮಾಡುವುದನ್ನು ತಪ್ಪಿಸಲು ದೇವನಹಳ್ಳಿ ತಾಲೂಕಿನ ನಾಗರಾಜ್‌ರವರು ಒಂದು ಸರಳ ಪರಿಹಾರ ಕಂಡುಹಿಡಿದಿದ್ದಾರೆ. ಇವರು ಎಕ್ಕ *(Calotropis)* ಗಿಡವನ್ನು ತಮ್ಮ ಬೆಳೆಯ ಸುತ್ತ ಬೆಳೆದಿದ್ದಾರೆ. ಬೆಳಕಿನ ಪ್ರತಿಫಲನ ಎಕ್ಕ ಗಿಡದಿಂದಾಗಿ ಇಲಿಗಳು, ಬೆಳೆಯ ಹತ್ತಿರ ಸುಳಿಯುವುದಿಲ್ಲ ಎನ್ನುವುದು ನಾಗರಾಜ್‌ರವರ ಅನುಭವ.


ನಾಟಿ ಸೊಳ್ಳೆ ಬತ್ತಿ

ಎಂ.ಬಿ. ಚಂದ್ರಶೇಖರ್ ಮೂಲತಃ ಹಾಸನದ ತುರುಕರುಹಳ್ಳಿಯ ರೈತರು. ದೇಶೀಯ ದನಕರುಗಳ ಸಗಣಿ ಗಂಜಲ ಮತ್ತು ನಾಲ್ಕು ಬಗೆಯ ಗಿಡಮೂಲಿಕೆಗಳ ಮಿಶ್ರಿತ ನಾಟಿ ಸೊಳ್ಳೆ ಬತ್ತಿ ತಯಾರಿಸಿ ಬಳಸುತ್ತಿದ್ದಾರೆ. ಹಾಗೂ ಮಾರಾಟಕ್ಕೂ ತಯಾರಿಸಿ ದ್ದಾರೆ. ಸಂಜೆ ದನಕರು ಬರುವ ಮುನ್ನ ಕೊಟ್ಟಿಗೆಯಲ್ಲಿ ಬತ್ತಿ ಹಚ್ಚುವರು. ಬತ್ತಿ ನಿಧಾನವಾಗಿ ಉರಿದು ಹೊಗೆ ಕೊಟ್ಟಿಗೆಯಲ್ಲಿ ತುಂಬಿಕೊಳ್ಳುತ್ತದೆ. ಹೊಗೆ ಯಲ್ಲಿನ ಗಿಡ ಮೂಲಿಕೆಯ ವಾಸನೆಗೆ ಸೊಳ್ಳೆ ಒಳಗಡೆ ಬರುವುದು ಕಡಿಮೆಯಾಗುತ್ತದೆ ಎನ್ನುವರು. ಹಾಗೆಯೇ ವಾಸದ ಮನೆಯಲ್ಲಿ ಕೂಡ ಹಚ್ಚಿದರೆ ಸೊಳ್ಳೆಯಿಂದ ಮುಕ್ತಿ ಜೊತೆಗೆ ಮಾನವರ ಆರೋಗ್ಯಕ್ಕೆ ತುಂಬಾ ಒಳ್ಳೆಯದೇ ಹೊರತು ದುಷ್ಪರಿಣಾಮವಿಲ್ಲ ಎನ್ನುವರು. ಘಾಟು ಇಲ್ಲದ ಹೊಗೆ ಕುಡಿಯು ವುದರಿಂದ ಶೀತ, ಕೆಮ್ಮು, ನೆಗಡಿ, ಗಂಟಲು ನೋವು, ಚರ್ಮ ಕಾಯಿಲೆ, ಕಜ್ಜಿ ಕುರಗಳಿಂದ ಸ್ವಲ್ಪ ದೂರವಿರಬಹುದೆನ್ನುತ್ತಾರೆ. ಅದರಲ್ಲೂ ಬಾಣಂತಿಯರ ಹತ್ತಿರ ಹಚ್ಚಿದರೆ ಮಗು ಹಾಗೂ ತಾಯಿಯ ಆರೋಗ್ಯ ಉತ್ತಮಗೊಳ್ಳುವುದು ಎನ್ನುತ್ತಾರೆ. ಬತ್ತಿ ಬೂದಿಯಾದ ನಂತರ ಬಾಯಿಯ ಹಲ್ಲು ಸ್ವಚ್ಛಗೊಳಿಸಲು ಬಳಸಬಹುದೆನ್ನುತ್ತಾರೆ. ಗಂಟಲಲ್ಲಿ ಕಸ ಗಂಟು ಆದಾಗ ಇದರ ಬಿಸಿಬೂದಿ ತಿಕ್ಕಿದರೆ ಕಡಿಮೆಯಾಗುತ್ತದೆ. ಗಾಯವಾದಾಗ ಬೂದಿ ಹಚ್ಚಿದರೆ ಗಾಯವಾಸಿಯಾಗುತ್ತದೆನ್ನುತ್ತಾರೆ. ನಾಟಿ ಸೊಳ್ಳೆ ಬತ್ತಿ ಬೇಕಿದ್ದವರು ದೂರವಾಣಿ 9343217394 ರ ಮೂಲಕ ಸಂಪರ್ಕಿಸಿರಿ.



ಫ್ಯಾನ್ ಕ್ಲಾಂಪ್

ಸಾಮಾನ್ಯವಾಗಿ ಮನೆಯಲ್ಲಿ ತೂಗಾಡುವ ಫ್ಯಾನಿನ ರೆಕ್ಕೆಯ ಮೇಲೆ ಧೂಳುತುಂಬಿ ನೇತಾಡುತ್ತಿರುತ್ತದೆ. ಇದನ್ನು ಸ್ವಚ್ಛಗೊಳಿಸುವುದು ಕಷ್ಟದ ಕೆಲಸ. ಕಾರಣ ಒಂದು ರೆಕ್ಕೆಯನ್ನು ಸ್ವಚ್ಛಗೊಳಿಸಲು ಮುಟ್ಟಿದೊಡನೆ ಫ್ಯಾನ್ ತಿರುಗಲು ಶುರು ಮಾಡುತ್ತದೆ. ಇದಕ್ಕಾಗಿ ಅಸ್‌ನೆಲ್ಲಾ ಅನ್ನುವವರು ಒಂದು ಸುಲಭ ಉಪಾಯವನ್ನುಕಂಡು ಹಿಡಿದಿದ್ದು ಇದರ ವಿವರವನ್ನು ಹನಿಬೀ 2006 ನೇ ಸಂಚಿಕೆಯಲ್ಲಿ ಕೊಡ ಲಾಗಿದೆ. ಈ ಕೆಲಸಕ್ಕಾಗಿ ಒಂದು ಉದ್ದನೆಯ ಕ್ಲಾಂಪ್ ಕೈ ಹಿಡಿಯುಳ್ಳ ಹ್ಯಾಂಡಲ್‌ಗೆ ಲಿವರ್‌ನ್ನು ಜೋಡಿಸುವುದು. ಈ ಲಿವರ್‌ನಿಂದ ಒಂದು ಕೈಯಲ್ಲಿ ರೆಕ್ಕೆಯನ್ನು ಹಿಡಿದುಕೊಂಡು, ಇನ್ನೊಂದು ಕೈಯಲ್ಲಿ ಉದ್ದನೆಯ ಹ್ಯಾಂಡಲ್‌ಗೆ ಸಿಕ್ಕಿಸಿದ ಬ್ರಷ್‌ನ ಸಹಾಯದಿಂದ ಫ್ಯಾನ್‌ನನ್ನು ಸ್ವಚ್ಛಗೊಳಿಸಬಹುದು.



ಮೂಲ: ಹನಿಬೀ VOL 17(3) , ಸೆಪ್ಟೆಂಬರ್ 2006, ಪುಟ 17.

ನಬೀ ಸಾಹೇಬರ ಅಸ್ತ್ರಗಳು

ಬಾಗಲಕೋಟೆ ಬಾದಾಮಿ ತಾಲ್ಲೂಕಿನ ಚೊಳಚಗುಡ್ಡದ ನಿವೃತ್ತ ಪ್ರಾಥಮಿಕ ಶಾಲಾ ಶಿಕ್ಷಕರಾದ ನಬೀ ಸಾಹೇಬ ಕೇಸುಸಾ ಮಕಾನದಾರರು ತಮ್ಮ 24 ಎಕರೆ ಕೃಷಿಯಲ್ಲಿ ಸ್ಥಳೀಯವಾಗಿ ದೊರಕುವ ಸಸ್ಯಗಳನ್ನು ಸಂಗ್ರಹಿಸಿ ಕೊಳೆಹಾಕಿ ಹಲವಾರು ಪೀಡೆ ನಾಶಕಗಳನ್ನು ತಯಾರಿಸಿದ್ದಾರೆ. ಅವುಗಳೆಂದರೆ :

ಅಗ್ನಿ ಅಸ್ತ್ರ :- ಐದು ಕೆ.ಜಿ. ಬೇವಿನ ಎಲೆ, ಎರಡು ಕೆ.ಜಿ. ಹೊಗೆ ಸೊಪ್ಪು ಮೂರು ಕೆ.ಜಿ. ಜವಾರಿ ಬೆಳ್ಳುಳ್ಳಿ, ನಾಲ್ಕು ಕೆ.ಜಿ. ಚಿಕ್ಕ ಹಸಿಮೆಣಸಿನಕಾಯಿ, 20 ಲೀ. ಜವಾರಿ ಆಕಳ ಗಂಜಲ ಇವೆಲ್ಲವನ್ನು ಕೂಡಿಸಿ 20 ದಿವಸ ನೆನೆಸಬೇಕು. ನಂತರ ಹಿಂಡಿ ತೆಗೆದು ಮಿಶ್ರಣವನ್ನು ಸಂಗ್ರಹ ಮಾಡಿಟ್ಟುಕೊಂಡು, 200 ಲೀಟರ್ ನೀರಿಗೆ ಮಿಶ್ರಣಮಾಡಿ ಸಿಂಪಡಿಸಬೇಕೆನ್ನುತ್ತಾರೆ. ಇದರಿಂದ ಬೆಳೆಗಳಿಗೆ ಬರುವ ಸಸ್ಯ ಹೇನು *(Aphids)*, ಬಿಳಿ ನೊಣ *(white fly)* ಮತ್ತು ಜಿಗಿ ಹುಳು *(Jassids)* ಗಳ ಯಶಸ್ವಿ ನಿಯಂತ್ರಣ ಸಾಧ್ಯವೆನ್ನುತ್ತಾರೆ. ಈ ದ್ರಾವಣ ಮೂರು ತಿಂಗಳವರೆಗೆ ಸಂಗ್ರಹಿಸಿಡಬಹುದಾಗಿದ್ದು ಇದರಿಂದ ಪರಿಸರಕ್ಕೆ ಯಾವುದೇ ತೊಂದರೆ ಇರುವುದಿಲ್ಲ ಎನ್ನುತ್ತಾರೆ ಸಾಹೇಬರು.

ಬ್ರಹ್ಮಾಸ್ತ್ರ:- ತಲಾ ಒಂದು ಕೆ.ಜಿಯಷ್ಟು ಹಾಗಲ ಎಲೆ, ಲೆಕ್ಕಿ ಎಲೆ, ಎಕ್ಕ ಎಲೆ, ಬೇವಿನ ಎಲೆ, ಹುಲಗಲಿ ಎಲೆ (ಹೊಂಗೆ), ಸೀತಾಫಲ ಎಲೆ, ನುಗ್ಗಿ ಎಲೆ, ಔಡಲ ಎಲೆ (ಹರಳು), ದಾಳಿಂಬೆ ಎಲೆ, ದತ್ತೂರಿ ಎಲೆ, ಲಾಂಟಾನ ಎಲೆ, ನೀಲಗಿರಿ ಎಲೆ, ಬಿಲ್ವಪತ್ರೆ ಎಲೆ,ಕಲ್ನಾರು, ಪಾರ್ಥೇನಿಯಂ, ಹೊಗೆ ಸೊಪ್ಪು ನಾಲ್ಕು ಕೆ.ಜಿ. ಚಿಕ್ಕ ಹಸಿಮೆಣಸಿನಕಾಯಿ, ನಾಲ್ಕು ಕೆ.ಜಿ. ಬೆಳ್ಳುಳ್ಳಿ, 20 ಲೀ. ಜವಾರಿ ಆಕಳ ಗಂಜಲ, 10 ಕೆ.ಜಿ. ಜವಾರಿ ಆಕಳ ಸಗಣಿ, ಒಂದು ಕೆ.ಜಿ. ಚೊಗಚೆ ಎಲೆ, ಈ ಎಲ್ಲಾ ವಸ್ತುಗಳನ್ನು 50 ಲೀಟರ್ ನೀರಿನಲ್ಲಿ 21 ದಿವಸ ನೆನೆಸಬೇಕಂತೆ. ನಂತರ ಸರಿಯಾಗಿ ತಿರುಗಿಸಿ ಸೋಸಿಕೊಂಡು, ಸಂಗ್ರಹ ಮಾಡಿಕೊಂಡು ಇಡಬೇಕೆನ್ನುತ್ತಾರೆ. 100 ಲೀ. ನೀರಿಗೆ 2 ರಿಂದ 3 ಲೀ.ದ್ರಾವಣ ಸೇರಿಸಿ ಸಿಂಪಡಿಸಬೇಕು ಎನ್ನುವ ಸಾಹೇಬರು ಯಾವುದೇ ಕೀಟಗಳಿಗೂ ಇದು ರಾಮಬಾಣವಾಗುತ್ತದೆ ಎನ್ನುತ್ತಾರೆ.

ಬೀಜಾಮೃತ (ಬೀಜ ಸಂಸ್ಕಾರ):- ಬೇಕಾಗುವ ಸಾಮಾನುಗಳು ; ಐದು ಲೀಟರ್ ಆಕಳ ಗಂಜಲ, ಐದು ಕೆ.ಜಿ. ಸಗಣಿ, 100 ಗ್ರಾಂ ಸುಣ್ಣ ಸಗಣಿಯನ್ನು ತೆಳುವಾದ ಬಟ್ಟೆಯಲ್ಲಿ ಕಟ್ಟಿ ಬಕೆಟ್ ನೀರಿನಲ್ಲಿ ತೇಲಿಬಿಡಬೇಕು. ಸುಣ್ಣವನ್ನು ಒಂದು ಲೀಟರ್ ನೀರಿನಲ್ಲಿ ರಾತ್ರಿ ನೆನೆ ಹಾಕಿಕೊಳ್ಳಬೇಕು. ಮುಂಜಾನೆ ಸಗಣಿ ರಾಡಿಯನ್ನು ಹಿಂಡಿ ತೆಗೆದು ಸುಣ್ಣದ ತಿಳಿ ನೀರನ್ನು ಮತ್ತು ಗಂಜಲ ಎಲ್ಲವನ್ನು ಸೇರಿಸಿ ಇದರಲ್ಲಿ ಬೀಜವನ್ನು ಒಂದು ನಿಮಿಷ ಅದ್ದಬೇಕು. ಗೆಡ್ಡೆಗಳಾದರೆ ಅದನ್ನು ಒಂದು ನಿಮಿಷ ಅದ್ದಿ ತೆಗೆಯಬೇಕು. ಇದರಿಂದ ಬೆಳೆಗಳಿಗೆ ಬೇರಿನಿಂದ ಬರತಕ್ಕ ರೋಗ ಆಗುವುದಿಲ್ಲ, ಮೊಳಕೆ ಸಹ ಚೆನ್ನಾಗಿ ಬರುತ್ತದೆ.

ನಬೀ ಸಾಹೇಬರು ಈ ಎಲ್ಲಾ ಪ್ರಯೋಗಗಳನ್ನು ತಮ್ಮ ಹೊಲದಲ್ಲಿ ಬಾಳೆ, ಹೂವು, ಹತ್ತಿ, ಗೋವಿನ ಜೋಳ, ಸೂರ್ಯಕಾಂತಿ ಬೆಳೆಗಳ ಮೇಲೆ ಕಳೆದ ನಾಲ್ಕು ವರ್ಷಗಳಿಂದಲೂ ನಡೆಸಿಕೊಂಡು ಬಂದಿರುವರು. ಇವೆಲ್ಲಕ್ಕೂ ಮೂಲಾಧಾರವಾಗಿ ಜೀವಾಮೃತ ಬಳಸುತ್ತಿರುವರು. ಈ ಪ್ರಯೋಗಗಳ ಫಲವಾಗಿ 35 ಕೆ.ಜಿ. ತೂಕದ ಬಾಳೆಗೊನೆ, ಎಕರೆಗೆ ಹತ್ತು ಟನ್ ಕಾಕಡ, ಮೈಸೂರು ಮಲ್ಲಿಗೆ ಹೂವು ಮತ್ತು 30-35 ಟನ್ ಗೋವಿನ ಜೋಳ ಕಟಾವು ಮಾಡಿರುವರು.

ವಿ.ಸೂ : ಈ ಬಗ್ಗೆ ಹೆಚ್ಚಿನ ವಿವರ ಬೇಕಾದವರು ಇವರನ್ನು ನೇರವಾಗಿ ಸಂಪರ್ಕಿಸಬಹುದು. ವಿಳಾಸ : ನಬೀ ಸಾಹೇಬ ಕೇಸುಸಾ ಮಕಾನದಾರ, ಚೊಳಚಗುಡ್ಡ ಅಂಚೆ, ಬಾದಾಮಿ ತಾಲೂಕು, ಬಾಗಲಕೋಟೆ ಜಿಲ್ಲೆ
ಫೋನ್ ನಂ : 08357-240843 , ಮೊಬೈಲ್ : 9448921125

ರೇಷ್ಮೇಕೃಷಿಯಲ್ಲಿ ಊಜಿನೊಣದ ನಿಯಂತ್ರಣ

ರೇಷ್ಮೇ ಕೃಷಿಯಲ್ಲಿ ಊಜಿನೊಣದಿಂದ ಬಹಳ ನಷ್ಟ ಅನುಭವಿಸಬೇಕಾಗುತ್ತದೆ. ಈ ಬಗೆಯ ನಷ್ಟವನ್ನು ವಿಚಾರ ಮಾಡಿದಾಗ ಗದಗದ ಎಸ್.ಎಮ್. ಮಂಗಳಿಯವರಿಗೆ ನೈಲಾನ್ ಸೊಳ್ಳೆಪರದೆಯ ಮಚ್ಚರದಾನಿಯ ಕಲ್ಪನೆಯು ಹೊಳೆಯಿತು. ಹುಳು ಸಾಕುವ ಮನೆಯಲ್ಲಿ ಹುಳುಗಳಿರುವ ಸ್ಟಾಂಡುಗಳ ಸುತ್ತಲೂ ಸೊಳ್ಳೆ ಪರದೆ ಹಾಕುವುದು ಸಾಮಾನ್ಯವಾಗಿ ರೇಷ್ಮೆ ಬೆಳೆಗಾರರು ಅನುಸರಿಸುವ ಪದ್ಧತಿ. ಮಂಗಳಿಯವರು ಈ ಪದ್ಧತಿಯನ್ನೇ ಪರಿಷ್ಕರಿಸಿ ಹೆಚ್ಚು ಪರಿಣಾಮಕಾರಿಯಾಗುವಂತೆ ಪ್ರಯತ್ನಿಸಿದ್ದಾರೆ. ಹುಳುಗಳ ಸ್ಟಾಂಡ್ ಸುತ್ತಲೂ ಹಾಕುವ ಸೊಳ್ಳೆಪರದೆಯ ಅಳತೆಯನ್ನು ಹೆಚ್ಚಿಸಿ, ಹುಳುಗಳ ಸ್ಟಾಂಡ್‌ನಿಂದ ಕನಿಷ್ಠ ಎರಡು ಅಡಿ ಅಂತರದಲ್ಲಿ ಸೊಳ್ಳೆ ಪರದೆ ಇರಬೇಕು. ಜೊತೆಗೆ ಕೆಳಭಾಗದ ಅಂಚು ಕನಿಷ್ಠ 10 ರಿಂದ 12 ಇಂಚು ನೆಲದ ಮೇಲೆ ಹಾಸಲು ಸಾಧ್ಯವಾಗುವಂತಿರಬೇಕು. ಇದಲ್ಲದೆ, ಈ ಸೊಳ್ಳೆ ಪರದೆಯಿಂದ ಆವೃತವಾದ ಹುಳು ಸಾಕಣೆ ಜಾಗಕ್ಕೆ ಬರುವ ಮೊದಲು ಒಂದು ಹೊರಗಿನ ವಾತಾವರಣದಿಂದ ಪ್ರತ್ಯೇಕಿಸುವ ಕೋಣೆ (Ante chamber). ಈ Ante chamberಗೆ ಹೊರಗಿನಿಂದ ಬರಲು ಹಾಗೂ ಒಳಗೆ ಹೋಗಲು ನೆರವಾಗುವ ಎರಡು ಬಾಗಿಲುಗಳು. ಸೊಳ್ಳೆ ಪರದೆಯಲ್ಲೇ ಪ್ಲಾಸ್ಟಿಕ್ ಜಿಪ್ ಹಾಕಿ ಸುಲಭವಾಗಿ ಕಿಂಡಿ ಉಳಿಯದಂತೆ ತೆಗೆಯಲು ಸಾಧ್ಯವಾಗುವ ಬಾಗಿಲುಗಳು. ಈ Ante chamberನ ಹಾಗೂ ಒಳಭಾಗದ ಸೊಳ್ಳೆಪರದೆಯ ಕೆಳಗಿನ ಅಂಚಿನ ಸುಮಾರು 10-12 ಇಂಚುಗಳ ಭಾಗವನ್ನು ಸಮತಟ್ಟಾದ ನೆಲದ ಮೇಲೆ ಹಾಸಿ, ಅದು ಸುಲಭವಾಗಿ ಸರಿದಾಡದಂತೆ, ಮೇಲೆ ಏಳದಂತೆ ಹಾಗೂ ಎಲ್ಲಿಯೂ ಕಿಂಡಿ ಉಳಿಯದಂತೆ ಅದರ ಮೇಲೆ ಮರಳು ಸುರಿದು ಭದ್ರಗೊಳಿಸಬೇಕು.

ಭತ್ತದ ಗದ್ದೆಯಲ್ಲಿ ಏಡಿ ನಿಯಂತ್ರಣ

ಕೊಪ್ಪ ತಾಲೂಕಿನ ಶಾಂತಿ ಗ್ರಾಮದ ಹೆಚ್.ವಿ. ಕೃಷ್ಣಯ್ಯನವರು ತಮ್ಮ ಭತ್ತದ ಗದ್ದೆಯಲ್ಲಿ ಏಡಿಗಳ ಹಾವಳಿಯಿಂದ ಕುಳಿಗಳಾಗಿ ನೀರು ಇಂಗಿ ಹೋಗದಂತೆ ಮಾಡಲು ಗದ್ದೆಯಲ್ಲೇ ಬೆಳೆಯುವ ಪಾಚಿಯನ್ನು ತೆಗೆದು ಕುಳಿಗಳನ್ನು ಮುಚ್ಚುವುದರ ಮೂಲಕ ಏಡಿ ಹಾವಳಿಯನ್ನು ನಿಯಂತ್ರಿಸುತ್ತಿದ್ದಾರೆ. ಇವರ ಪ್ರಕಾರ ಪಾಚಿಯ ವಾಸನೆಗೆ ಏಡಿಗಳು ದೂರ ಸರಿಯುತ್ತವೆ. ಹಾಗೂ ಒಮ್ಮೆ ಕುಳಿ ಮಾಡಿದ ಏಡಿಯು ಕುಳಿ ಮುಚ್ಚಿ ಹೋದ ಬಳಿಕ ಹತ್ತಿರದ ಇನ್ನೊಂದು ಕುಳಿಯ ಮುಖೇನ ಹೊರಬರುವುದು. ಆಗ ಹೊರಬಂದ ಕುಳಿಯನ್ನೂ ಕೂಡ ಪಾಚಿಯ ಸಹಾಯದಿಂದ ಮುಚ್ಚುವುದು.

ಮೆಣಸಿನ ರೋಗಕ್ಕೆ ಸಾವಯವ ರೋಗನಾಶಕ

ತುಮಕೂರು ಜಿಲ್ಲೆ ಪಾವಗಡ ತಾಲೂಕಿನ ಚೆನ್ನಕೃಷ್ಣಪ್ಪ ರೆಡ್ಡಿಯವರು ಮೆಣಸಿನ ಗಿಡಗಳಿಗೆ ಬರುವ ಎಲೆ ಮುದುರು ರೋಗಕ್ಕೆ , ತಮ್ಮ ಪರಿಸರದಲ್ಲಿ ಸುಲಭವಾಗಿ ಸಿಗುವ ಏಳು ತೆರನಾದ ಸೊಪ್ಪುಗಳನ್ನು ಬಳಸಿ ಒಂದು ಕಷಾಯವನ್ನು ಕಂಡುಹಿಡಿದಿದ್ದಾರೆ. ಬೇವು, ಎಕ್ಕ , ಬಿಳಿಲಕ್ಕಿ, ಆಡುಮುಟ್ಟದ ಸೊಪ್ಪು *(Tylophora asthamatica)*, ಈಶ್ವರೀ ಬೇರು *(Aristolochia indica,)*, ಕಡ್ಡಿಕಳ್ಳಿ ಹಾಗೂ ಕಣಗಲೆಸೊಪ್ಪುಗಳನ್ನು (*Nerium odorum*) ಒಂದೊಂದು ಕಿಲೋನಂತೆ ಸಮಪ್ರಮಾಣದಲ್ಲಿ ತೆಗೆದು ಕೊಳ್ಳಬೇಕು. ಈ ಸೊಪ್ಪುಗಳನ್ನು ಚಿಕ್ಕ ಚಿಕ್ಕ ತುಂಡುಗಳಾಗಿ ಕತ್ತರಿಸಿ ಸುಮಾರು 80 ಲೀಟರ್ ನೀರಿಗೆ ಹಾಕಿ ಡೀಸೆಲ್ ಬಣ್ಣ ಬರುವವರೆಗೆ ಕುದಿಸಬೇಕು. ಇದು ಒಂದು ಎಕರೆಗೆ ಸಾಕಾಗುತ್ತದೆ. ಒಂದು ದಿನ ಹಾಗೇ ಬಿಟ್ಟು ತಣಿಸಿ ನಂತರ ಸೋಸಬೇಕು. ಸೋಸಿದ ಕಷಾಯಕ್ಕೆ ಅಷ್ಟೇ ಪ್ರಮಾಣದ ನೀರು ಬೆರೆಸಬೇಕು. ಸ್ವಲ್ಪ ಬಟ್ಟೆ ಸೋಪಿನ ದ್ರಾವಣ ಬೆರೆಸಿ ಸಿಂಪಡಿಸಿದರೆ ಮೆಣಸಿನ ಬೆಳೆಗೆ ಬರುವ ಎಲೆ ಮುದುರು ರೋಗವನ್ನು ಹತೋಟಿಯಲ್ಲಿಡಬಹುದಂತೆ.

ಅಡಿಕೆ ತೋಟಕ್ಕೆ ಹೊಸ ಮಣ್ಣು ಹಾಕುವ ಎರಡು ಅನುಶೋಧನೆಗಳು

ಅಡಿಕೆ ತೋಟಕ್ಕೆ ಹೊಸ ಮಣ್ಣು ತುಂಬುವುದು ಮಲೆನಾಡು, ಕರಾವಳಿಯಲ್ಲಿ ಸಾಮಾನ್ಯ ಪದ್ಧತಿ. ಆದರೆ ಇದಕ್ಕೆ ಕೂಲಿ ಆಳುಗಳ ಸಮಸ್ಯೆ. ಹೀಗಾಗಿ ಸರಳ ತಂತ್ರಜ್ಞಾನ ಬಳಸಿಕೊಂಡಿರುವ ಅನುಶೋಧಕರಿಬ್ಬರ ವಿವರ ಹೀಗಿದೆ.



ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರು ತಾಲೂಕಿನ ಬಟ್ಯಡ್ಕದ ಶ್ರೀ ಶ್ಯಾಮ ಸುಂದರರು ಆರು ಎಕರೆಯ ಒಡೆಯರು. ಇವರು ತಮ್ಮ ತೋಟಕ್ಕೆ ಮಣ್ಣು ತುಂಬಲು ಗುಜರಿಯಿಂದ ಲಾಂಬಿ ರಿಕ್ಷಾ ಒಂದನ್ನು ಕೊಂಡರು. ಇದಕ್ಕೆ ನಾಲ್ಕು ಅಡಿ ಅಗಲ, ನಾಲ್ಕು ಅಡಿ ಉದ್ದ, ಎರಡು ಅಡಿ ಎತ್ತರದ ಟ್ರಾಲಿ ಮಾಡಿ ಕೀಲಿ ತಯಾರಿಸಿದರು. ಇದು ಟಿಪ್ಪರ್‌ನಂತೆ ಮೇಲೇಳುವ ವ್ಯವಸ್ಥೆ ಮಾಡಿಕೊಂಡರು. ಮಣ್ಣು ತುಂಬಿದ ಟಿಪ್ಪರ್‌ನ ಹಿಂಭಾಗದ ಅಡಿಯಲ್ಲಿ ಕೀಲಿ ಸಡಿಲಿಸಿದಾಗ ಮೇಲೇರಿ ಮಣ್ಣು ಬೀಳುವಂತೆ ರಚಿಸಿದ್ದಾರೆ. ಎರಡು ಜನರಿದ್ದಲ್ಲಿ ದಿನಕ್ಕೆ 600 ರಿಂದ 700 ಬುಟ್ಟಿ ಮಣ್ಣು ಒಂದು ಫರ್ಲಾಂಗು ದೂರಕ್ಕೆ ಸಾಗಿಸಬಹುದೆನ್ನುತ್ತಾರೆ. ಇಷ್ಟಕ್ಕೆ ಒಂದು ಲೀಟರ್ ಸೀಮೆಎಣ್ಣೆ, ಸ್ವಲ್ಪ ಆಯಿಲ್, ಆರಂಭಕ್ಕೆ ಅಲ್ಪ ಪೆಟ್ರೋಲ್ ಸಾಕೆನ್ನುತ್ತಾರೆ. ತೋಟಕ್ಕೆ ಮಣ್ಣು ತುಂಬಲು ಸುಮಾರು 12 ಸಾವಿರ ವೆಚ್ಚ ಬೀಳುವುದಾದಲ್ಲಿ, ಈ ಟಿಪ್ಪರ್ ರಿಕ್ಷಾ ಬಳಕೆಯಿಂದ 3500 ರೂ ಖರ್ಚು ತಗಲುವುದೆನ್ನುವರು. ಕೂಲಿಯಾಳುಗಳ ಖರ್ಚನ್ನು ಶೇ. 75ರಷ್ಟು ಉಳಿಸಬಹುದೆನ್ನುತ್ತಾರೆ. ತೋಟದಿಂದ ಅಡಿಕೆ, ತೆಂಗು, ಸೋಗೆ, ಬಾಳೆಗೊನೆ, ದನಕರುಗಳ ಮೇವು ಇನ್ನಿತರ ಸಾಗಾಣಿಕೆಗೂ ಬಳಸಬಹುದೆನ್ನುತ್ತಾರೆ. ರೈತರಿಗೆ ಸುಲಭ ಸಾಧ್ಯವಾದ ಕೈಗೆಟಕುವ ಬೆಲೆಯಲ್ಲಿ ರಿಕ್ಷಾದ ಕಂಡಿಷನ್ ಹೊಂದಿಕೊಂಡು 15 ರಿಂದ 18 ಸಾವಿರದಲ್ಲಿ ಈ ಟಿಪ್ಪರ್ ತಯಾರಿಸಿಕೊಳ್ಳಬಹುದೆನ್ನುತ್ತಾರೆ ಶ್ಯಾಮಸುಂದರ್.

ಹಾಗೆಯೇ ಚಿಕ್ಕಮಗಳೂರು ಜಿಲ್ಲೆಯ ನರಸಿಂಹರಾಜಪುರ ತಾಲ್ಲೂಕಿನ ಸೀತೂರು ಅಂಚೆಯ ದೇವಾಲೆ ಕುಣಜ ಗ್ರಾಮದ ಶ್ರೀ ಶೃಂಗೇಶ್ವರರು ಟಿಲ್ಲರ್‌ಗೆ ನೂತನ ಮಿನಿ ಟ್ರಾಲಿಯೊಂದನ್ನು ತಯಾರಿಸಿಕೊಂಡಿದ್ದಾರೆ. ಈ ಮಿನಿ ಟ್ರಾಲಿ ಅಡಿಕೆ ತೋಟದೊಳಕ್ಕೆ ಮಣ್ಣು ಅಥವಾ ಇತರ ಸಾಮಾನು ಸಾಗಿಸಬಹುದಾದ ಸರಳ ಟ್ರಾಲಿಯಾಗಿದೆ. ಜೊತೆಗೆ ಲಿಫ್ಟ್ ಸಹಾ ಮಾಡುವ ಮಾದರಿಯಲ್ಲಿದೆ. ಮರಗಳ ಸಾಲಿನಲ್ಲಿ ದೊಡ್ಡ ಟ್ರಾಲಿಯನ್ನು ತಿರುಗಿಸಿ ವಾಪಾಸ್ಸು ಬರಲು ಜಾಗವಿರುವುದಿಲ್ಲ. ಕನಿಷ್ಠ 15X15 ಅಡಿ ಅಗಲ ಬೇಕಾಗುತ್ತದೆನ್ನುತ್ತಾರೆ. ಹೀಗಾಗಿ ಶೃಂಗೇಶ್ವರರು ಅಡಿಕೆ ತೋಟದಲ್ಲಿ ಓಡಾಡಲು ಅನುಕೂಲವಾಗುವಂತೆ 12 ಗೇಜ್ ತಗಡನ್ನು ಆಕಾರಕ್ಕೆ ತಕ್ಕಂತೆ ವೆಲ್ಡ್ ಮಾಡಿ ಅದಕ್ಕೆ ಬೇರಿಂಗ್ ಇರುವ ರಿಕ್ಷಾ ಟಯರ್ ಜೋಡಿಸಿ ಮಿನಿ ಟಿಲ್ಲರ್ ನಿರ್ಮಿಸಿಕೊಂಡಿದ್ದಾರೆ. ಇದರಲ್ಲಿ 30 ಬುಟ್ಟಿ ಮಣ್ಣು ಹಿಡಿಯುತ್ತದೆ. ಟ್ರಾಲಿಗೆ ಮಣ್ಣು ತುಂಬಿದಾಗ ಟಿಲ್ಲರ್ ನಡೆಸುವವರು ಟ್ರಾಲಿ ಹಿಂದುಗಡೆ ನಡೆದು ಹೋಗಬೇಕು. ಮಣ್ಣು ಖಾಲಿ ಮಾಡಿದಾಗ ಟ್ರಾಲಿ ಒಳಗಡೆ ನಿಂತು ಟಿಲ್ಲರ್ ನಡೆಸಬಹುದೆನ್ನುತ್ತಾರೆ. ಈ ಟ್ರಾಲಿ ಬಳಸಿದಾಗ 25 ಜನರು ಮಾಡುವ ಕೆಲಸಕ್ಕೆ 4 ಜನರು ಸಾಕಾಗುತ್ತದೆಯಂತೆ. ಆಳುಗಳ ಮೂಲಕ ಮಣ್ಣು ಹೊಡೆಸಿದರೆ ಬುಟ್ಟಿಗೆ ರೂ 1.80 ಖರ್ಚುಗುತ್ತದೆನ್ನುತ್ತಾರೆ. ಈ ಟ್ರಾಲಿ ಮೂಲಕ ಕೇವಲ 75 ಪೈಸೆ ಖರ್ಚಾಗುತ್ತದೆನ್ನುತ್ತಾರೆ. ಇದನ್ನು ಶೃಂಗೇಶ್ವರರು ಮೂರು ವರ್ಷಗಳಿಂದ ಬಳಸುತ್ತಿದ್ದಾರೆ. ಹಾಗೆಯೇ ಇತರ ಐದು ಜನ ಅಡಿಕೆ ಬೆಳೆಗಾರರಿಗೆ ಈ ಟ್ರಾಲಿಯನ್ನು ತಯಾರಿಸಿ ಕೊಟ್ಟಿರುತ್ತಾರೆ. ಈ ಟ್ರಾಲಿ ತಯಾರಿಸಲು ಶೃಂಗೇಶ್ವರರಿಗೆ ತಗುಲಿರುವ ಖರ್ಚು 8 ಸಾವಿರಗಳಷ್ಟಾಗಿರುತ್ತದೆ.

ಕಬ್ಬಿನ ಕಣ್ಣು ಕೀಳುವ ಸಾಧನ

ಕಬ್ಬಿನಲ್ಲಿ ಗಂಟುಗಳನ್ನು ಅಲ್ಲದೇ ಕಣ್ಣುಗಳನ್ನು ಬಳಸುವುದರ ಮೂಲಕವೂ ರೈತರು ಬೆಳೆ ತೆಗೆಯುತ್ತಾರೆ. ಆದರೆ ಕಣ್ಣುಗಳನ್ನು ಕೀಳುವ ಕೆಲಸಕ್ಕೆ ಶ್ರಮ ಹಾಗೂ ಕೂಲಿ ಬೇಕಾಗುತ್ತದೆ. ಈ ಸಮಸ್ಯೆಗೆ ಪರಿಹಾರವೆಂಬಂತೆ ಬೆಳಗಾವಿಯ ಕಲ್ಮೇಶ ಯಲ್ಲಡಗಿಯವರು 'ಆರೋಸ್ಕೋಪ' ಎಂಬ ಉಪಕರಣವನ್ನು ಆವಿಷ್ಕರಿಸಿದ್ದಾರೆ. ಈ ಯಂತ್ರದ ಭಾರವನ್ನು ಪ್ರಯೋಗಿಸಿ, ಸುಲಭವಾಗಿ ಕಣ್ಣನ್ನು ಕೀಳಬಹುದೆನ್ನುತ್ತಾರೆ. ಹೀಗೆ ಕಣ್ಣನ್ನು ಕೀಳುತ್ತಿದ್ದಂತೆ, ಕಬ್ಬಿನ ಜಲ್ಲನ್ನು ಮುಂದಕ್ಕೆ ಸರಿಸಿ, ಎಲ್ಲಾ ಕಣ್ಣುಗಳನ್ನು ಕೂಡ ಕೀಳಬಹುದಂತೆ. ಹೀಗೆ ಕಬ್ಬಿನ ನಾಟಿಯಲ್ಲಿ ಕಣ್ಣುಗಳನ್ನು ಬಳಸುವುದರಿಂದ ಕಬ್ಬಿನ ಉಳಿತಾಯವನ್ನು ಮಾಡಬಹುದು ಎನ್ನುತ್ತಾರೆ. ಗಂಟುಗಳ ಬದಲು ಕೆಲವು ರೈತರು ಇದರ ಉಪಯೋಗವನ್ನು ಪಡೆಯುತ್ತಿದ್ದು, ಸುಮಾರು ರೂ. 750 ರೂ ಬಳಸಿ ಈ ಸಾಧನವನ್ನು ತಯಾರಿಸಬಹುದೆನ್ನುತ್ತಾರೆ, ಕಲ್ಮೇಶರವರು. ಈ ಸಾಧನದ ಬಗ್ಗೆ ಆಸಕ್ತಿ ಇರುವವರು, ಹೆಚ್ಚಿನ ಮಾಹಿತಿಗೆ ಈ ವಿಳಾಸಕ್ಕೆ ಸಂಪರ್ಕಿಸಬಹುದು.

ವಿಳಾಸ: ಕಲ್ಮೇಶ ಗುರುಪಾದ ಯಲ್ಲಡಗಿ ಅಂಚೆ: ಶೇಗುಣಶಿ, ಅಥಣಿ ತಾಲ್ಲೂಕು, ಬೆಳಗಾವಿ ಜಿಲ್ಲೆ–591311, *ಮೂಲ: ಅಡಿಕೆ ಪತ್ರಿಕೆ, ನವೆಂಬರ್ 2006, ಪುಟ 37*


ಸುಧಾರಿತ ಭತ್ತದ ಬಾಯ್ಲರ್

ಕಾಸರಗೋಡು ತಾಲೂಕು ನಾಂದ್ರೋಡಿನ ಮಹಾಲಿಂಗೇಶ್ವರ ಭಟ್‌ರವರು ತಮ್ಮ ಸುತ್ತಮುತ್ತಲಿನ ಭತ್ತ ಬೆಳೆಗಾರರ ಮಿಲ್ಲಿಂಗ್ ಸಮಸ್ಯೆಗೆ ಉತ್ತರ ವಾಗಿ ಸುಧಾರಿತ ಭತ್ತದ ಬಾಯ್ಲರ್ ಕಂಡುಹಿಡಿದಿದ್ದಾರೆ. ಇವರ ಪ್ರಕಾರ ಭತ್ತವನ್ನು 24 ಗಂಟೆ ಕಾಲ ನೀರಿನಲ್ಲಿ ನೆನೆಯಿಸಬೇಕು. ಭತ್ತ ಬೇಯಿಸಲು ಬೇಕಾಗುವ ಹಬೆಯನ್ನು ಭತ್ತದ ಹೊಟ್ಟು ಉಪಯೋಗಿಸಿ ಪಡೆಯಲಾಗುವುದು. ಹಬೆಯು ಕಬ್ಬಿಣದ ಪೈಪ್ ಮುಖಾಂತರ 120 ಕೆ.ಜಿ. ಸಾಮರ್ಥ್ಯದ ಸ್ಟೀಲ್ ಡ್ರಮ್ಮಿಗೆ ಹಾದು ಬರುತ್ತದೆ. ಮೊದಲೇ ನೆನೆಸಿದ ಭತ್ತವನ್ನು ಈ ಸ್ಟೀಲ್ ಡ್ರಮ್ಮಿಗೆ ಸುರಿದು, ಭತ್ತ ಬೆಂದ ಬಳಿಕ ನೇರ ಬಿಸಿಲಿಗೆ ಒಣ ಹಾಕುತ್ತಾರೆ. ಹಬೆಯು ಕಬ್ಬಿಣ ಪೈಪಿನ ಮುಖಾಂತರ ಹಾದು ಹೋಗುವುದರಿಂದ ಕೆಲಸಗಾರರಿಗೆ ನೇರ ಬಿಸಿಯ ತಾಪ ತಾಗುವುದಿಲ್ಲ. ಸಣ್ಣ ಪ್ರಮಾಣದ ಭತ್ತವನ್ನು ಅಲ್ಲದೇ ವಿವಿಧ ತಳಿಯ ಭತ್ತವನ್ನು ಬೇರೆ ಬೇರೆ ಡ್ರಮ್ಮಿನಲ್ಲಿ ಬೇಯಿಸುವುದರಿಂದ ಸಣ್ಣ ರೈತರಿಗೆ ಈ ವಿಧಾನ ಬಹಳ ಅನುಕೂಲ ಎನ್ನುತ್ತಾರೆ, ನಾಂದ್ರೋಡುರವರು . ಕಳೆದ 21 ವರ್ಷಗಳಿಂದ ಈ ವಿಧಾನವನ್ನು ಬೆಳೆಸಿಕೊಂಡು ಬಂದಿರುವ ಇವರು ಇದಕ್ಕೆ ತಗಲುವ ವೆಚ್ಚ ಸುಮಾರು 25 ರಿಂದ 30 ಸಾವಿರ ಎನ್ನುತ್ತಾರೆ.



ಚಕ್ಕೋತ ಸಿಪ್ಪೆಯಿಂದ ಜಂತು ಹುಳ ನಿವಾರಣೆ

ದನ, ಎಮ್ಮೆ, ಕುರಿ, ಆಡು ಮುಂತಾದ ಸಾಕುಪ್ರಾಣಿಗಳಲ್ಲಿ ಹಾಲು ಕುಡಿಯುವ ಹಂತದಲ್ಲಿ ಜಂತುಹುಳು ಬಾಧೆ ಬರುತ್ತದೆ. ಈ ಜಂತು ನಿವಾರಣೆಗೆ ಉಪಾಯವೊಂದನ್ನು ಬೆಂಗಳೂರು ಜಿಲ್ಲೆಯ ದೇವನಹಳ್ಳಿಯ ಶಿವನಾಪುರ ರಮೇಶ್ ಕಂಡುಕೊಂಡಿದ್ದಾರೆ. ಇವರು ಹೆಚ್ಚು ಕುರಿ ಸಾಕಿರುವುದರಿಂದ ಚಿಕ್ಕ ಮರಿಗಳು ಮನೆಯಲ್ಲೇ ಇರುತ್ತಿದ್ದವು. ರಮೇಶ್ ಚಕ್ಕೋತ ಬೆಳೆದಿರುವುದರಿಂದ ಹಣ್ಣು



ತಿನ್ನುವಾಗ ಮರಿಗಳು ಇವರ ಸುತ್ತ ಓಡಾಡುತ್ತಿದ್ದವು. ಪ್ರೀತಿಯಿಂದ ಮರಿಗಳಿಗೆ ಸಿಪ್ಪೆ ತಿನ್ನಲು ಕೊಡುತ್ತಿದ್ದರು. ಈ ಮರಿಗಳಲ್ಲಿ ಜಂತು ಕಾಣಲಿಲ್ಲ. ಆದರೆ ಪಕ್ಕದ ಮನೆಯ ಮರಿಗಳಲ್ಲಿ ಜಂತು ಬರುತ್ತಿತ್ತು. ರಮೇಶ್ ಹಾಗೆಯೇ ಗಮನಿಸಿದರು. ಆ ಕುರಿ ಮರಿಗಳಿಗೆ ಚಕ್ಕೋತ ಸಿಪ್ಪೆಯನ್ನು ತಿನ್ನಿಸಿದರು. ಅವುಗಳಲ್ಲಿ ಜಂತು ನಿವಾರಣೆಯಾಗಿದ್ದನ್ನು ಕಂಡುಕೊಂಡರು. ಅಂದಿನಿಂದ ಇದರ ಪ್ರಯೋಗಶೀಲರಾದರು. ಕುರಿಗಳಲ್ಲಿ ಜಂತುಹುಳು ಪರಿಹಾರ ಕಂಡು ಕೊಂಡರು. ಒಂದು ಚಕ್ಕೋತ ಹಣ್ಣಿನ ಸಿಪ್ಪೆಯನ್ನು ಒಣಗಿಸಿ ಆರು ಕುರಿಮರಿಗಳಿಗೆ ಒಂದು ಬಾರಿ ಕೊಟ್ಟರೆ ಜಂತು ನಿವಾರಣೆ ಎನ್ನುತ್ತಾರೆ. ಈ ಪದ್ಧತಿಯನ್ನು ಸುಮಾರು 30 ವರ್ಷಗಳಿಂದ ಅನುಸರಿಸುತ್ತಿದ್ದೇನೆ ಎನ್ನುತ್ತಾರೆ ರಮೇಶ್.


ಸೀತಾಫಲದಿಂದ ಜಾನುವಾರು ಹುಳು ನಿಯಂತ್ರಣ

ಸೀತಾಫಲದ ಎಲೆಗಳನ್ನು ಮಕ್ಕಳ ಗಾಯದ ಮೇಲೆ ಸವರಿದಾಗ ಅದರ ಮೇಲೆ ಬರುವ ಹುಳಗಳನ್ನು ಹೇಗೆ ನಿಯಂತ್ರಿಸುತ್ತದೆಯೋ, ಅದೇ ರೀತಿ ಜಾನುವಾರುಗಳ ಗಾಯದ ಮೇಲೆ ಸೀತಾಫಲದ ಎಲೆ ಅರೆದು ಹಚ್ಚಿದರೆ ಇದರ ಸೂಕ್ಷ್ಮ ಜೀವಿ ನಿರೋಧಕ ಗುಣದಿಂದ, ಗಾಯಕ್ಕೆ ಬರುವ ಹುಳಗಳನ್ನು ನಿಯಂತ್ರಿಸಬಹುದೆಂಬುದನ್ನು ಒರಿಸ್ಸಾದ ತೈನ್ಸಿ ಗ್ರಾಮದ ಅಂತರ್ಯಾಮಿ ಪ್ರಧಾನ್‌ರವರು ಕಂಡುಕೊಂಡಿದ್ದಾರೆ.

ಮೂಲ: ಹನಿಬೀ, VOL 17(1-2), ಜೂನ್2006, ಪುಟ 41

ದನಗಳ ಕೊಂಬು ಮುರಿತಕ್ಕೆ ಚಿಕಿತ್ಸೆ

ನಚಿಮುತು ತಮಿಳುನಾಡಿನ ಈರೋಡಿನವರು. ಇವರು ದನಗಳ ಮುರಿದ ಕೊಂಬಿಗೆ ಸೂಕ್ತ ಪರಿಣಾಮಕಾರಿ ಸಾಂಪ್ರದಾಯಿಕ ಚಿಕಿತ್ಸೆ ಕಂಡು ಹಿಡಿದಿದ್ದಾರೆ. ಬೊಗಸೆ ತುಂಬ ಲೋಳೆಸರ (*Aloe vera*) ಮತ್ತು ತಾಳೆಮರದ (*Palmyra*) ಎಲೆಗಳನ್ನು ಬೇಯಿಸಿ ಇದಕ್ಕೆ ರಾಗಿ ಹಿಟ್ಟನ್ನು ಮಿಶ್ರ ಮಾಡಬೇಕು. ಈ ಮಿಶ್ರಣವನ್ನು ಒಂದು ಶುಭ್ರ ಬಟ್ಟೆಯಲ್ಲಿ ಸುತ್ತಿ ಮುರಿದ ಕೊಂಬಿನ ಸುತ್ತ ಕಟ್ಟಿದರೆ, ಇದು ಮರುಜೋಡಣೆಗೆ ಸಹಾಯಕಾರಿಯಾಗಬಲ್ಲದು. ಒಮ್ಮೆ ಗಾಯ ಗುಣವಾದ ಬಳಿಕ, ಕಟ್ಟಿದ ಬಟ್ಟೆ



ತನ್ನಿಂದ ತಾನೇ ಉದುರಿ ಹೋಗುವುದಂತೆ.

ಮೂಲ: ಹನಿಬೀ, VOL 17(3), ಸೆಪ್ಟೆಂಬರ್ 2006, ಪುಟ 15

ತುರುಕರುಹಳ್ಳಿಯ ದೇಸೀ ಗೋವು ಇತಿಹಾಸ

ಸುಂದರ ಶಿಲ್ಪ ಕಲೆಯಲ್ಲಿ ವಿಶ್ವವಿಖ್ಯಾತಿಯನ್ನು ಪಡೆದ ಬೇಲೂರು ಹಾಗೂ ಹಳೇಬೀಡು, ಇವೆರಡರ ನಡುವೆ ಪುಷ್ಪಗಿರಿ ಬೆಟ್ಟ ಇದೆ. ಇದರ ತಪ್ಪಲಿನಲ್ಲಿರುವ ಮಲ್ಲಿಕಾರ್ಜುನಪುರ ಸಣ್ಣಹಳ್ಳಿ.. ಇದು ಮೈಸೂರು ಮಹಾರಾಜರ ಕಾಲದ ಹಿಂದಿನಿಂದಲೂ ದೇಶೀಯ ದನಕರುಗಳಿಗೆ ಖ್ಯಾತಿ ಪಡೆದ ಊರು. ಇಲ್ಲಿ ಜೀವ ವೈವಿಧ್ಯ ಹಾಗೂ ದನಕರುಗಳು ಅಧಿಕವಾಗಿದ್ದವು. ಹಾಗಾಗಿ ಮೈಸೂರು ಮಹಾರಾಜರು ಈ ಮಲ್ಲಿಕಾರ್ಜುನಪುರಕ್ಕೆ 'ತುರುಕರುಹಳ್ಳಿ' (ಹಸುಕರು) ಎಂದು ಅವರ ಕಾಲದಲ್ಲಿ ಮರುನಾಮಕರಣ ಮಾಡಿದರು. ಈ ತುರುಕರುಹಳ್ಳಿ ಹಾಸನದಿಂದ 24 ಕಿ.ಮಿ. ದೂರದಲ್ಲಿದೆ.

ಚೋಳರ ಕಾಲದಲ್ಲಿ ಬೇಲೂರು ಪಕ್ಕ ರಣಘಟ್ಟ ಹಳ್ಳಿಯ ಹತ್ತಿರ ಯಗಚಿ ನದಿಗೆ ಅಡ್ಡಲಾಗಿ ಒಡ್ಡು ಕಟ್ಟಿ ದ್ವಾರಸಮುದ್ರಕ್ಕೆ ನೀರು ತೆಗೆದುಕೊಂಡು ಹೋಗಿದ್ದರು. ಈ ಕಾಲುವೆ ಸಂಗಯ್ಯದೇವರ ಕಾಲುವೆ ಎಂದು ಹೆಸರು ಪಡೆದಿದೆ. ಈ ಕಾಲುವೆ ತುರುಕರುಹಳ್ಳಿ ವ್ಯಾಪ್ತಿಯ ಜಮೀನಿನ ಮಧ್ಯದಲ್ಲಿ ಹಾದುಹೋಗಿದೆ. ಚೋಳರ ಕಾಲದ ಈ ಗ್ರಾಮದಲ್ಲಿ ಈಗಲೂ 'ಗಂಗೆಮಡಿ' ಎಂಬ ಸ್ಥಳವಿದೆ. ಎಂತಹ ಬರಗಾಲ ಬಂದರೂ ಇಲ್ಲಿ ನೀರು ಇಂಗುವುದಿಲ್ಲ, ಮೇಲೆಯೇ ಹರಿಯುತ್ತಿರುತ್ತದೆ. ಬರಗಾಲದಲ್ಲಿ ಸುತ್ತ ಮುತ್ತಲ ಹಳ್ಳಿಯ ದನಕರುಗಳು ನೀರು ಕುಡಿಯಲು ಬರುತ್ತಿದ್ದವು. ಗೋಮಾಳದ ಒಂದು ಭಾಗವನ್ನು 'ಜೇನುಗುತ್ತಿ' ಎಂದು ಈಗಲೂ ಕರೆಯುತ್ತಿದ್ದಾರೆ. ಆಗಿನ ಕಾಲದಲ್ಲಿ ಜೇನು ಹೆಚ್ಚು ಇರುತ್ತಿದ್ದವು. ಆದ್ದರಿಂದ ಈ ಹೆಸರು ಬಂದಿದೆ.

ಮೈಸೂರು ಮಹಾರಾಜರು ರಾಜ್ಯದಾದ್ಯಂತ ಕುದುರೆಯನ್ನೇರಿ ಪ್ರವಾಸ ಹೊರಟಿದ್ದರು. ಮಾರ್ಗ ಮಧ್ಯದಲ್ಲಿ ರಾಜರಿಗೆ ಈ ಸುಂದರ ತಾಣ ಕಾಣಿಸಿತು. ಸುತ್ತಲೂ ಸಾವಿರಾರು ದನಕರುಗಳು ಮೇಯುತ್ತಿರುವುದನ್ನು ಗಮನಿಸಿದರು. ರಾಜರು ವಿಚಾರಿಸಲು ಮುಂದಾದರು. ದನ ಕಾಯುವ ಮಕ್ಕಳು ಮರದಲ್ಲಿ ಜೋಕಾಲಿ ಆಟವಾಡುತ್ತಿದ್ದರು. ಮರದ ಹತ್ತಿರ ಬಂದ ಮಹಾರಾಜರನ್ನು ನೋಡಿದ ಮಕ್ಕಳು ಹಿರಿಯರಿಗೆ ಸುದ್ದಿ ತಿಳಿಸಿದರು. ಸಂತೋಷಭರಿತವಾಗಿ ಗ್ರಾಮಸ್ಥರು ರಾಜರಿಗೆ ಉಪಚರಿಸಲು ಹಾಲು, ಮೊಸರು, ಮಜ್ಜಿಗೆ ತಂದರು. ಇದನ್ನು ಕಂಡ ಮಹಾರಾಜರಿಗೆ ಮಹದಾನಂದವಾಯಿತು. ಈ ದೇಶೀಯ ತಳಿಯ ಅಮೃತದ ಸವಿಯನ್ನುಂಡ ಮಹಾರಾಜರು ತಮ್ಮ ಮೈಸೂರು ಅರಮನೆಗೆ ಬೆಣ್ಣೆ ಕಳುಹಿಸುವಂತೆ ಆದೇಶಿಸಿದರು. ರಾಜರಿಗೆ ಕುಡಿಯಲು ಕೊಟ್ಟ ಹೆಣ್ಣು ಮಗುವಿನ ತಲೆಗೆ ಅವರ ಪೇಟ ಇಟ್ಟು ಕೈಗೆ ದಂಡಿಗೆ ಕೊಟ್ಟು, ಅವರ ಮನೆತನದ ಹೆಸರಾದ 'ಮಲ್ಲಿಗೆ' ಎಂದು ನಾಮಕರಣ ಮಾಡಿದರು. ಅಂದಿನಿಂದ ಸುತ್ತಮುತ್ತಲ ಜನ ಈಗಲೂ ತುರುಕರುಹಳ್ಳಿ ಎಂದು ಕರೆಯುತ್ತಿದ್ದಾರೆ.

ಅಲ್ಲದೆ ಬೇಲೂರು ತಾಲ್ಲೂಕು ಕಛೇರಿಯಲ್ಲಿಯೂ ಕೂಡ ತುರುಕರುಹಳ್ಳಿ ಎಂಬ ದಾಖಲೆ ಇದೆ. ದನ ಕರು ಮೇಯಲು ನೂರು ಎಕರೆ ಗೋಮಾಳವನ್ನು ತುರುಕರುಹಳ್ಳಿ ಹೊಂದಿದೆ. ಹೆಚ್ಚು ದನ ಕರು ಹೊಂದಿರುವುದರಿಂದ ಗ್ರಾಮಸ್ಥರು ಸಾಮಾಜಿಕ ಅರಣ್ಯ ಸಮಿತಿಯೊಂದಿಗೆ ಈ ಗೋಮಾಳದಲ್ಲಿ ಅರಣ್ಯ ಅಭಿವೃದ್ಧಿಪಡಿಸಿಕೊಂಡಿದ್ದಾರೆ. ಈಗಲೂ ಇದು ಜೀವ ವೈವಿಧ್ಯ, ಕಾಡು ಪ್ರಾಣಿ, ಪಕ್ಷಿಗಳು, ದನಕರುಗಳಿಗೆ ಆಸರೆಯಾಗಿದೆ. ಸಾವಿರ ಸಂಖ್ಯೆಯಲ್ಲಿ ನವಿಲು ಈಗಲೂ ನಲಿದಾಡುತ್ತಿವೆ. ದನಕರುಗಳಿಗಾಗಿ ಗೋಮಾಳದ ಮಧ್ಯದಲ್ಲಿ ಕಾಲುವೆಗೆ ಅಡ್ಡಲಾಗಿ ಕೆರೆ ಕಟ್ಟಿದ್ದಾರೆ. ಇದು 'ಸಂಗಯ್ಯನ ಕಟ್ಟೆ' ಎಂದೇ ಹೆಸರುಪಡೆದಿದೆ. ದನಕರುಗಳು ನೀರು ಕುಡಿದು ಮೈ ಉಜ್ಜಿಕೊಳ್ಳಲು ಕೆರೆಯ ಸುತ್ತಾ ಕಲ್ಲು ನೆಟ್ಟಿದ್ದಾರೆ.

ಲೇಖಕರು : ತುರುಕರುಹಳ್ಳಿ ಸಿದ್ದರಾಮ

ಸರ್ವೋದಯ ಕೃಷಿಕ-ರಾಮಚಂದ್ರರಾಯರು

ಪರ್ಯಾಯ ಕೃಷಿಯ ಹರಿಕಾರ ಜಪಾನಿನ ಮಸ್ನೋಬ ಪುಕುವೋಕಾ ಮತ್ತು ಗಾಂಧಿವಾದದ ಸಾಧಕ ಕರಾವಳಿ ಜಿಲ್ಲೆಯ ಕೃಷಿ ಋಷಿ ಚೇರ್ಕಾಡಿ ರಾಮಚಂದ್ರರಾಯರ ಕೃಷಿಯಲ್ಲಿನ ಆವಿಷ್ಕಾರ ಒಂದೇ. ಅದು ಪೂರ್ಣ ಸಾವಯವದ ಒಂದು ಹುಲ್ಲಿನ ಕ್ರಾಂತಿ. ಮೊಳಕೆ ಚಿಗುರು ಕ್ರಿಯೆ ಈ ನೆಲದಲ್ಲಿ ಅತ್ಯಂತ ಸಹಜ ಕ್ರಿಯೆ ಎಂಬುದನ್ನು ತಿಳಿದ ರಾಯರು, ತಮ್ಮ ಬರಡು ನೆಲದಲ್ಲಿ ನೀರು ನಿಲ್ಲಿಸದೆ, ಉಳದೇ, ರಸಗೊಬ್ಬರ ಸುರಿಯದೆ ಕೃಷಿ ಮಾಡಿದರು. ಮಣ್ಣಿಗೆ ಸಹಜ ಸಾರವಿದೆ ಎನ್ನುವ ಇವರು ಭತ್ತ, ಬಾರ್ಲಿಯ ದೇಶೀ ತಳಿಗಳನ್ನು ನೆಲದ ಮೇಲೆ ಬಿತ್ತಿದರು. ಅದರ ಮೇಲೆ ಭತ್ತದ ಹುಲ್ಲನ್ನು ಚೆಲ್ಲಿದರು. ಮಳೆನೀರಿಗೆ ಈ ಮೇಲು ಹಾಸು ಕೊಳೆಯಿತು. ಕೊಳೆತ ಬೈಹುಲ್ಲಿನ ಎಡೆಯಿಂದ ಭತ್ತ ಚಿಗುರತೊಡಗಿತು. ಪುಕುವೋಕಾರಿಗೆ ವಿಜ್ಞಾನ ವಿದ್ಯಾರ್ಥಿಯಾಗಿದ್ದರಿಂದ ಹೊರಜಗತ್ತಿನ ಸಂಬಂಧ ಸಂವೇದನೆ ಇತ್ತು. ಚೇರ್ಕಾಡಿಯವರಿಗೆ ತನ್ನ ತೋಟವೇ ಜಗತ್ತು. ಕರ್ನಾಟಕದ ಅನೇಕ ಕಡೆಗಳಲ್ಲಿರುವ ಗುಡ್ಡೆ, ಕುಮೇರಿ, ಇಳಿಜಾರು ಮತ್ತು ಬಯಲು ಪ್ರದೇಶಗಳಲ್ಲಿ ಕಡಿಮೆ ಖರ್ಚಿನಿಂದ, ಕೇವಲ ಮಾನವ ಶ್ರಮದಿಂದಷ್ಟೇ ಹೆಚ್ಚು ಭತ್ತದ ಉತ್ಪನ್ನ ಪಡೆಯಲು ಚೇರ್ಕಾಡಿಯವರ ಸರ್ವೋದಯ ಪದ್ಧತಿ ಉಪಯೋಗಿಸಿದರು. ಈ ಪದ್ಧತಿಯಲ್ಲಿ ರಾಯರು 1965ರಿಂದ ಸುಮಾರು ಹದಿನೈದು ವರ್ಷಗಳ ಕಾಲ ಎರಡು ಎಕರೆ ಜಾಗದಲ್ಲಿ ಕಡಿಮೆ ಖರ್ಚಿನಲ್ಲಿ ಅಧಿಕ ಇಳುವರಿ ತೆಗೆದರು. ತಮ್ಮ ಭವಿಷ್ಯದ ಭದ್ರತೆಗೆ 30 ವರ್ಷಗಳ ಹಿಂದೆಯೇ ಮಾವು, ಹಲಸು, ಗೇರು, ತೇಗ, ಹೆಬ್ಬಲಸು, ಪೇರಳೆ ಮುಂತಾದ ದೀರ್ಘ ಕಾಲ ಫಲ ನೀಡುವ ಬಹುಪಯೋಗಿ ಗಿಡಮರಗಳನ್ನು ನೆಟ್ಟು ಇಳಿವಯಸ್ಸಿನಲ್ಲಿ ಈ ಮರಗಳಿಂದ ಬರುವ ಉತ್ಪತ್ತಿಯಿಂದ ತಮ್ಮ ಆರ್ಥಿಕ ಪರಿಸ್ಥಿತಿಯನ್ನು ಉತ್ತಮ ಪಡಿಸಿಕೊಂಡಿರುತ್ತಾರೆ. ಸರಳ ಜೀವನದಲ್ಲಿಯೇ ಸುಖ, ಸಂತೋಷ, ಸಮಾಧಾನ ಪಡೆದು ಸಾರ್ಥಕವಾಗಿ ಬಾಳುವುದು ಹೇಗೆ ಎಂಬುದಕ್ಕೆ ಚೇರ್ಕಾಡಿ ರಾಮಚಂದ್ರರಾಯರು ಜ್ವಲಂತ ಸಾಕ್ಷಿ.

ವೈವಿಧ್ಯಮಯ ಕೃಷಿಕ - ಕೆ. ಮೋನಪ್ಪ ಕರ್ಕೇರ

ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರಿನ ಮಂಗಳಾಫಾರ್ಮನ ಕೆ. ಮೋನಪ್ಪ ಕರ್ಕೇರ ತನ್ನ ತೋಟದಲ್ಲಿ ಮರ ಮಟ್ಟು, ಜೇನಸು, ಕಾಡುತತ್ತಿ, ಅಡಿಕೆ, ಗೇರು ಹೀಗೆ ನಾನಾ ತರಹದ ಬೆಳೆ ಬೆಳೆದು ಸ್ವಾವಲಂಬಿ ಬದುಕು ನಡೆಸುತ್ತಿದ್ದಾರೆ. ಕೃಷಿ ಪಂಡಿತ ಪುರಸ್ಕೃತ ಕರ್ಕೇರರು ಮೂವತ್ತು ವರುಷದ ಕೃಷಿ ಅನುಭವದ ಜೊತೆ, ಸಾಮಾಜಿಕ ಸಂಘಟನೆಗಳ ಸಂಪರ್ಕವನ್ನು ಇರಿಸಿಕೊಂಡಿದ್ದಾರೆ. ತಮ್ಮ ತೋಟದ ಎಲ್ಲಾ ಹಣ್ಣಿನ ಉತ್ಪನ್ನಗಳನ್ನು ಮೋನಪ್ಪನವರು ಸ್ವತಃ ಮಾರಾಟ ಮಾಡಿದ್ದಾರೆ. ಮಧ್ಯವರ್ತಿಗಳ ಗುಂಪುಗಾರಿಕೆಗಳಿಂದ ನ್ಯಾಯಯುತವಾದ ದರ ಸಿಗದೇ ಹೋದಾಗ ಇವರು ತನ್ನ ಉತ್ಪನ್ನಗಳ ಜೊತೆಗೆ ತೂಕ ಯಂತ್ರ ಹಾಗೂ ಸಹಾಯಕನೊಂದಿಗೆ ತಾವೇ ಸಂತೆಗೆ ಹೋಗಿ ಉತ್ತಮ ವ್ಯಾಪಾರ ಕುದುರಿಸಿಕೊಂಡರು. ಇವರ ತೋಟದಲ್ಲಿ 250ಕ್ಕೂ ಮಿಕ್ಕಿ ಮಾವಿನ ಗಿಡಗಳು, 200 ಚಿಕ್ಕು ಗಿಡಗಳು, 3000 ಅಡಿಕೆ ಮರಗಳು, 50 ಪಪ್ಪಾಯಿ ಗಿಡಗಳು, 200 ತೆಂಗು ಹಾಗೂ 1500 ಗೇರು ಗಿಡಗಳಿವೆ. ನಾಲ್ಕು ಕಡೆಗಳಲ್ಲಿರುವ ತನ್ನ 45 ಎಕರೆ ಜಾಗದಲ್ಲಿ ಏಳು ಸಾವಿರಕ್ಕೂ ಮಿಕ್ಕಿ ಇಂಗು ಗುಂಡಿಗಳನ್ನು ತೋಡಿದ್ದಾರೆ. ಇವರು ಮಾಡಿರುವ 77x45 ಮೀಟರ್ ವಿಸ್ತಾರದ, ಆರು ಮೀ. ಆಳದ ಹೊಂಡದಲ್ಲಿ ಮಳೆ ನೀರಿನ ಸಂಗ್ರಹದ ಪರಿಣಾಮವಾಗಿ ಅನತಿ ದೂರದಲ್ಲಿರುವ ಕೊಳವೆ ಬಾವಿಯಲ್ಲಿ ಆಗಸ್ಟ್‌ನಿಂದ ನವೆಂಬರ್ ತನಕ ನೀರು ತುಂಬಿ ಹರಿಯುತ್ತಿರುತ್ತದೆ. ಈ ಹೊಂಡದಲ್ಲಿ ಕಾಟ್ಲ, ರೋಹು, ಆಫ್ರಿಕನ್ ಫಿಶ್ ಮೊದಲಾದ ಮೀನು ಸಾಕಣೆಯನ್ನು ಮಾಡುತ್ತಿದ್ದಾರೆ. ಇದಲ್ಲದೆ ಯಾರ್ಕಶೇರ್ ಹಂದಿ ಸಾಕಣೆ ಕೈಗೊಂಡಿದ್ದಾರೆ. ಸಂತೆಯಲ್ಲಿ ಉಳಿಯುವ ತರಕಾರಿ ತ್ಯಾಜ್ಯಗಳು, ಕಲ್ಯಾಣ ಮಂಟಪಗಳ ಉಳಿಕೆಯನ್ನು ಹಂದಿಗಳಿಗೆ ಆಹಾರವಾಗಿ ನೀಡುತ್ತಾರೆ. ಎಂಟು ವಿಧದ ಬಿದಿರು, ನೂರಕ್ಕೂ ಮಿಕ್ಕಿ ಔಷಧೀಯ ಸಸ್ಯಗಳು, ಸಾಗುವಾನಿ, ತೇಗ, ಹಲಸು, ಇತ್ಯಾದಿ ಮರಗಳನ್ನು ಬೆಳೆದ ಮೋನಪ್ಪನವರು ಕೈಯಾಡಿಸದ ಬೆಳೆಯಿಲ್ಲ, ಸಾಕಣೆಯಿಲ್ಲ, ಅಡಿಕೆ ಮಧ್ಯೆ ಒಂದು ಸಾವಿರ ಕಸಿ ಕೊಕ್ಕೋ ಗಿಡಗಳಿವೆ. ತನ್ನ ಸುತ್ತಮುತ್ತಲಿನ ಚುರುಕು ವಿದ್ಯಾರ್ಥಿಗಳನ್ನು ಗುರುತಿಸಿ, ರಜಾ ದಿವಸಗಳಂದು ತೋಟದ ಕೆಲಸಕ್ಕೆ ನಿಯುಕ್ತಿ ಮಾಡುತ್ತಾರೆ. ಈ ವಿದ್ಯಾರ್ಥಿಗಳ ಶಾಲಾಶುಲ್ಕ, ಸಮವಸ್ತ್ರದ ಹೊಣೆ ಇವರದು. ಇವರು ಹೇಳುವಂತೆ ಧಾರಾಳ ಹಣವಿದ್ದರೆ ಏನೇನೋ ಮಾಡಬಹುದು ಆದರೆ ಕೃಷಿಯ ಆದಾಯವನ್ನು ಪುನಃ ಕೃಷಿಗೇ ಬಳಸಿ ಸಮೃದ್ಧಿಯನ್ನಾಗಿ ಮಾಡಲು, ಒಬ್ಬನ ಆಯುಷ್ಯ ಸಾಕಾಗದು. ಕೇಂದ್ರ ತೋಟದ ಬೆಳೆಗಳ ಸಂಶೋಧನಾ ಸಂಸ್ಥೆಯಿಂದ ಉತ್ತಮ ಕೃಷಿಕ, ಕರ್ನಾಟಕ ಸರಕಾರದ ಕೃಷಿ ಪಂಡಿತ ಗೌರವ ಮೋನಪ್ಪರ ಕೃಷಿ ಪ್ರೀತಿ ಸಾಧನೆಗೆ ಸಂದ ಪುರಸ್ಕಾರ.

ವಿಳಾಸ: ಕೆ. ಮೋನಪ್ಪ ಕರ್ಕೇರ, ಮಂಗಳಾ ಫಾರ್ಮ, ಅಂಚೆ: ಮುಂಡೂರು, ಪುತ್ತೂರು ತಾಲ್ಲೂಕು, ದಕ್ಷಿಣ ಕನ್ನಡ ಜಿಲ್ಲೆ

ಮೂಲ: ಅಡಿಕೆ ಪತ್ರಿಕೆ ಜೂನ್ 2005, ಪುಟ11

ಹೊಸ ಚಿಂತನೆಯ ಮಾದರಿ ಕೃಷಿಕ- ಶ್ರೀಪಾದರಾವ್

ಪ್ರಗತಿಪರ ಕೃಷಿಕ ಸಾಗರದ ಎಡಜಿಗಳೆ ಮನೆ ಎಂ.ಜಿ. ಶ್ರೀಪಾದರಾಯರು ಹಳೇ ತಂತ್ರಜ್ಞಾನಕ್ಕೆ ಹೊಸ ಉಪಾಯವನ್ನು ನೀಡಿ ಹಲವಾರು ರೈತೋಪಯೋಗಿ ಆವಿಷ್ಕಾರವನ್ನು ಮಾಡಿರುವ ಅಪರೂಪದ ವ್ಯಕ್ತಿ. ಯಾವುದೇ ಸಂಸ್ಥೆಯ ತರಬೇತಿಯನ್ನು ಹೊಂದದೇ, ಕಠಿಣ ಪರಿಶ್ರಮ ಹಾಗೂ ಹೊಸ ಚಿಂತನೆಗಳ ಮುಖಾಂತರ ತಮ್ಮ ಒಂದೂವರೆ ಎಕರೆ ಅಡಿಕೆ ಹಾಗೂ ಮೂರು ಎಕರೆ ತೆಂಗಿನ ತೋಟವನ್ನು ಬಹಳಷ್ಟು ಅಭಿವೃದ್ಧಿಪಡಿಸಿದ್ದಾರೆ. ಆರಂಭದಲ್ಲಿ ಅಡಿಕೆ ಕೃಷಿಯನ್ನು ಮಾಡಿದ ಇವರು ತದನಂತರ ಸುಧಾರಿತ ಎಮ್ಮೆ ಹಾಗೂ ದೇಶೀಯ ಆಕಳ ತಳಿಗಳನ್ನೊಳಗೊಂಡ ಹೈನುಗಾರಿಕೆಗೆ ಮುಂದಾದರು. ಬೆಳೆ ವೈವಿಧ್ಯತೆ ಇವರ ಕೃಷಿಯಲ್ಲಿ ಮೊದಲು ಗೋಚರಿಸುವ ವಿಚಾರ. ಕಾಳು ಮೆಣಸು ಹಾಗೂ ಮೇವನ್ನು ಅಂತರ ಬೆಳೆಯಾಗಿ ತೆಂಗಿನ ತೋಟದಲ್ಲಿ ಬೆಳೆದಿದ್ದಾರೆ. ಜಮೀನಿನ ಪ್ರತಿಯೊಂದು ಇಂಚನ್ನು ಕೃಷಿಗೆ ಬಳಸಿರುವ ಶ್ರೀಪಾದರಾಯರು ಗುಡ್ಡಪ್ರದೇಶದಲ್ಲಿ ಗೇರು, ಮಾವು, ಬಿದಿರು, ಪೇರಳೆ ಇತ್ಯಾದಿ ಬೆಳೆಯನ್ನು ಮಾಡುತ್ತಿದ್ದಾರೆ. ಉತ್ತಮ ಗುಣಮಟ್ಟದ ಎರೆಹುಳ ಗೊಬ್ಬರವನ್ನು ಇವರು ಸ್ವತಃ ಉತ್ಪಾದಿಸಿ ಸಣ್ಣ ಪ್ರಮಾಣದಲ್ಲಿ ಮಾರಾಟವನ್ನು ಮಾಡುತ್ತಿದ್ದಾರೆ. ಮನೆ ಹಾಗೂ ಕೊಟ್ಟಿಗೆ ತ್ಯಾಜ್ಯಗಳನ್ನು ರಾಯರು ಸಮರ್ಪಕವಾಗಿ ಕೃಷಿ ಸಂಪನ್ಮೂಲವನ್ನಾಗಿ ಪರಿವರ್ತಿಸಿದ್ದಾರೆ.

ಕೈಯಿಂದ ಸ್ವಲ್ಪವೇ ಭಾರ ಹಾಕಿ ಸುಲಭವಾಗಿ ತೆಂಗಿನಕಾಯಿ ಸುಲಿಯುವ ಸರಳ ಉಪಕರಣವನ್ನು ಪರಿಚಯಿಸಿದ್ದಾರೆ. ವೆನಿಲ್ಲಾಕ್ಕೆ ಉತ್ತಮ ಧಾರಣೆಯಿದ್ದ ಕಾಲದಲ್ಲಿ ರಾಯರು ನೆರಳು ಬಲೆ ಬಳಸಿ ವೆನಿಲ್ಲಾ ಬಳ್ಳಿ ಕೃಷಿಯನ್ನು ಮಾಡಿದ್ದರು. ತೆಂಗು, ಅಡಿಕೆ, ಹಾಗೂ ವೆನಿಲ್ಲಾಕ್ಕೆ ನೀರಾವರಿಗಾಗಿ ಇವರು ಮೈಕ್ರೋಜೆಟ್ ವ್ಯವಸ್ಥೆಯ ಜೊತೆಗೆ ಹನಿ ನೀರಾವರಿ ಕೂಡ ಮಾಡಿರುವರು. ಅಡಿಕೆ ಮರ ಹತ್ತಲು ಕಬ್ಬಿಣದ ಪೈಪಿನ ಬದಲಾಗಿ ಹಗುರ ಆಲ್ಯೂಮಿನಿಯಂ ಏಣಿಯನ್ನು ತಯಾರಿಸಿಕೊಂಡಿದ್ದಾರೆ. ಎರೆಗೊಬ್ಬರ ಸ್ವಚ್ಛಗೊಳಿಸುವ ತೂಗಾಡುವ ಜಾಲರಿ, ಹೆಂಟೆ ಒಡೆದು ಸಮತಟ್ಟು ಮಾಡುವ ಸುಧಾರಿತ ಸಾಧನ. ಗೊಬ್ಬರಕ್ಕಾಗಿ ಸೊಪ್ಪನ್ನು ಕತ್ತರಿಸುವ ಮರದ ಸಾಧನ. ಹುಲ್ಲು, ಮಣ್ಣು, ಸಗಣಿದ್ರಾವಣ ಸಾಗಿಸಲು ಅನುಕೂಲವಾಗುವ ಬಂಡಿ, ಕೊಟ್ಟಿಗೆಯಿಂದ ಹೆಚ್ಚು ನೀರನ್ನು ತೆಗೆಯುವ ಸಲಿಕೆಯಾಕಾರದ ರಬ್ಬರ್ ಗೊರಬಲು, ಇವೇ ಮೊದಲಾದ ಸಾಧನಗಳನ್ನು ತಾವೇ ಸ್ವತಃ ಪ್ರಯತ್ನದಿಂದ ಕಳೆದ 15 ವರ್ಷಗಳಲ್ಲಿ ರೂಪಿಸಿದ್ದಾರೆ. ನೆರೆಕರೆಯ ರೈತರು ಈ ಆವಿಷ್ಕಾರಗಳ ಉಪಯೋಗವನ್ನು ಪಡೆಯುತ್ತಿದ್ದಾರೆ.

ಸರಳ ಜೀವನವನ್ನು ನಡೆಸುತ್ತಿರುವ ಸತತ ಕೃಷಿ ಅನ್ವೇಷಣೆಯ ಶ್ರೀಪಾದರಾಯರದ್ದು ಬೆಳಕಿಗೆ ಬಾರದ ಪ್ರತಿಭೆ. ಯಾವುದೇ ಸುದ್ದಿ ಪ್ರಚಾರಗಳ ಗೊಡವೆಗೆ ಹೋಗದ ಇವರು ಕೃಷಿಯಲ್ಲಿ ಸ್ವಯಂ ಪ್ರಯೋಗಶೀಲತೆಯನ್ನು ಎಲೆಮರೆಯ ಕಾಯಿಯಂತೆ ಮುಂದುವರಿಸಿಕೊಂಡು ಹೋಗುತ್ತಿದ್ದಾರೆ. ದೂರವಾಣಿ : 08183 –236082

ದೇವನಹಳ್ಳಿಯ ಚಕ್ಕೋತ ಮೂಲ ತಳಿಯ ಸಂರಕ್ಷಣೆ

ದೇಶೀಯ ಚಕ್ಕೋತ ತಳಿಯನ್ನು ಸಂರಕ್ಷಿಸಿ ಉಳಿಸುವ ಕೆಲಸವನ್ನು ದೇವನಹಳ್ಳಿಯ ಶಿವನಾಪುರದ ರೈತ ರಮೇಶ್‌ರವರು ಮಾಡುತ್ತಿದ್ದಾರೆ. ಆದರೆ ಇದನ್ನು ದ್ರಾಕ್ಷಿಯಂತೆ ಮಾರುಕಟ್ಟೆ ಬೆಳೆಯಾಗಿ ಬೆಳೆಯುತ್ತಿಲ್ಲ. ಬದಲಾಗಿ ತೋಟದ ಬದುವಿನಲ್ಲೋ ಅಥವಾ ಮನೆಯಲ್ಲೋ ಹಿತ್ತಲ ಗಿಡದಂತೆ ಬೆಳೆಸಿ ಇದರಲ್ಲಿ ವರ್ಷಕ್ಕೆ ಎರಡು ಬಾರಿ ಆದಾಯ ಮಾಡಿಕೊಳ್ಳುತ್ತಾರೆ. ಸಾವಯವ ಕೃಷಿಕರಾದ ರಮೇಶ್ ತಮ್ಮ ಎರಡೂವರೆ ಎಕರೆ ಜಮೀನಿನಲ್ಲಿ ಮಾವಿನಗಿಡ, ಬಾಳೆ, ದ್ರಾಕ್ಷಿ, ಹಿಪ್ಪುನೇರಳೆ, ಹೂ, ಹಣ್ಣಿನ ಗಿಡಗಳ ಜೊತೆಗೆ ಒಂಭತ್ತು ಚಕ್ಕೋತ ಗಿಡಗಳಿಗೆ ಆಶ್ರಯದಾತರಾಗಿದ್ದಾರೆ. ಇದರಲ್ಲಿ ಎರಡು ಥೈಲ್ಯಾಂಡ್ ಹಾಗೂ ಐದು ದೇವನಹಳ್ಳಿಯ ಉತ್ತಮ ತಳಿ ಎನ್ನುವುದು ವಿಶೇಷ. ಹೈಬ್ರಿಡ್ ತಳಿಗಳ ನಡುವೆ ಇದನ್ನು ಗುರುತಿಸುವುದು ಕಷ್ಟವಾದರೂ, ರಮೇಶ ಇದರ ಉಳಿವಿಗಾಗಿ ಗೂಟಿಕಟ್ಟಿ , ಕಣ್ಣು ಕಸಿಮಾಡಿ ಮತ್ತು ಬೀಜಹಾಕಿ 800-900 ಸಸಿಗಳನ್ನು ರೂಪಿಸಿ ತಾಲ್ಲೂಕಿನಾದ್ಯಂತ ವಿತರಿಸಿದ್ದಾರೆ. ಇವರ ಗಿಡ ವರ್ಷಕ್ಕೆ ಸುಮಾರು 500 ರಿಂದ 800 ಹಣ್ಣು ನೀಡುತ್ತದೆ.

ಅಪರೂಪದ ಚತುರ್ಭುಜ ಅವರೆಕಾಯಿ

ತಿಪಟೂರು ತಾಲೂಕು ಮಾರುಗೊಂಡನ ಹಳ್ಳಿಯ ಸಾವಯವ ಕೃಷಿಕರಾದ ಸದಾಶಿವಪ್ಪನವರು ಮಡಗಾಸ್ಕರ್ ಮೂಲದ ಅಪರೂಪದ ಚತುರ್ಭುಜ ಅವರೆಕಾಯಿಯನ್ನು ಸಂರಕ್ಷಿಸಿಕೊಂಡು ಬಂದಿದ್ದಾರೆ. ಸುಮಾರು 15 ಅಡಿ ಎತ್ತರದ ಮರಕ್ಕೆ ಹಬ್ಬಿದ ಇದರ ಬಳ್ಳಿಯ ತುಂಬಾ ಮೊಳ ಉದ್ದದ ನೂರಾರು ಕಾಯಿಗಳು ಜೋತು ಬೀಳುತ್ತವೆ. ಹೆಬ್ಬೆರಳಿನ ಗಾತ್ರದ ಕಾಯಿಗಳು ನಾಲ್ಕೂ ಬದಿಗಳಲ್ಲಿ ರೆಕ್ಕೆಗಳಿದ್ದುದರಿಂದ ಚತುರ್ಭುಜ ಅವರೆಕಾಯಿ *(winged beans)*, ಒಂದು ಅಪರೂಪದ ಬಳ್ಳಿ ತರಕಾರಿ .

ಇದು ಮಳೆಗಾಲದ ಆರಂಭದ ದಿನಗಳಲ್ಲಿ ಬಿತ್ತನೆಗೆ ಯೋಗ್ಯ ಎನ್ನುತ್ತಾರೆ. ನಾಲ್ಕು ಭುಜಗಳ ಈ ಬೀಜ ಗಡುಸಾಗಿರುವುದರಿಂದ ನೀರಿನಲ್ಲಿ ಒಂದು ರಾತ್ರಿ ನೆನೆಸಿ ಮಣ್ಣಿಗೆ ಹಾಕಿದರೆ ಬೇಗ ಮೊಳಕೆಯೊಡೆಯುತ್ತದೆ. ಕುಂಡ ಅಥವಾ ಪ್ಲಾಸ್ಟಿಕ್ ಚೀಲಗಳಲ್ಲಿ ಬೆಳೆಯುವವರು ಕನಿಷ್ಠ ಒಂದು ಅಡಿಯಷ್ಟು ಮಣ್ಣು ತುಂಬಬೇಕು. ವಾರಕ್ಕೊಮ್ಮೆಯಾದರೂ ನೀರು ಕೊಡಬೇಕು. ಅಗತ್ಯಕ್ಕೆ ತಕ್ಕಷ್ಟು ನೀರು ಕೊಡುವುದರಿಂದ ಹಾಗೂ ಬಳ್ಳಿಗಳಿಗೆ ಆಧಾರ ಒದಗಿಸುವುದರಿಂದಲೂ ಉತ್ತಮ ಇಳುವರಿ ಪಡೆಯಬಹುದೆನ್ನುತ್ತಾರೆ. ಎಳೆಯ ಕಾಯಿಗಳು ಅಡುಗೆಗೆ ಸೂಕ್ತ. ಇದರ ಚಿಗುರು, ಹೂ, ಮೊಗ್ಗು, ಬೇರಿನ ಗಡ್ಡೆಯನ್ನು ತರಕಾರಿಯಾಗಿ ಅಡುಗೆಗೆ ಬಳಸಬಹುದು. ಬಲಿತ ಕಾಯಿಗಳು ಒರಟಾಗಿದ್ದು ತಿನ್ನಲು ಬರುವುದಿಲ್ಲ. ಆದರೆ ಕಾಯಿಯ ಒಳಗಿನ ಬೀಜಗಳನ್ನು ಬಳಸಿ ರುಚಿಯಾದ ಆಹಾರ ತಯಾರಿಸಬಹುದೆಂಬುವುದು ಸದಾಶಿವಪ್ಪನವರ ಅನುಭವ. ಬೀಜ ಬಿತ್ತಿದ 10 ವಾರಗಳ ನಂತರ ಎಳೆಕಾಯಿಗಳು ಕೊಯ್ಲಿಗೆ ಸಿಗುತ್ತವೆ. ಚಳಿಗಾಲದಲ್ಲಿ ಇದನ್ನು ಹೆಚ್ಚು ಬಳಸುವುದರಿಂದ ದೇಹದ ಉಷ್ಣಾಂಶ ಹೆಚ್ಚುತ್ತದೆಯಂತೆ.

ಮೂಲ : ವಿಜಯ ಕರ್ನಾಟಕ, ಜನವರಿ 4, 2006

ವಿಶೇಷ ಸೂಚನೆ

- ಹಿತ್ತಲಗಿಡದಲ್ಲಿ ದಾಖಲಿಸಿರುವ ವಿವಿಧ ಮಾಹಿತಿ ಗಳನ್ನು ಸಂಶೋಧನೆ, ವಾಣಿಜ್ಯ ಮತ್ತಾವುದೇ ದೃಷ್ಟಿಯಿಂದ ಬಳಸ ಬಯಸುವವರು ಮೊದಲು ಹಿತ್ತಲಗಿಡದ ಅನುಮತಿ ಪಡೆಯತಕ್ಕದ್ದು.
- ರೈತರು ಮೊದಲು ತಾಂತ್ರಿಕ ಮಾಹಿತಿಗಳನ್ನು ನೀಡಿರುವ ಅಥವಾ ಸೃಷ್ಟಿಸಿರುವ ವ್ಯಕ್ತಿಗಳ ಸಂಪರ್ಕ ಏರ್ಪಡಿಸಿ, ಸಂಪೂರ್ಣ ವಿವರಗಳನ್ನು ಪಡೆಯುವುದು ಸೂಕ್ತ. ನಂತರ ತಮ್ಮ ಅನುಭವಗಳನ್ನು ಹಿತ್ತಲಗಿಡದೊಡನೆ ಹಂಚಿಕೊಳ್ಳಬೇಕಾಗಿ ಕೋರಲಾಗಿದೆ.
- ಇಲ್ಲಿ ಪ್ರಕಟಿಸಿರುವ ಪದ್ಧತಿ ಮತ್ತು ತಂತ್ರಜ್ಞಾನಗಳ ಬಳಕೆಯಲ್ಲಿ ಆಗುವ ಯಾವುದೇ ನಷ್ಟ, ಅನಾಹುತಗಳಿಗೆ ' ಹಿತ್ತಲಗಿಡ' ಜವಾಬ್ದಾರಿಯಲ್ಲ.

- ಸಂಪಾದಕ

ಸೊರಗು ಕಾಟವಿಲ್ಲದ ಕಾಳು ಮೆಣಸು

ಕಾಳು ಮೆಣಸನ್ನು ಕರ್ನಾಟಕ ಕೇರಳ ರಾಜ್ಯಗಳ ಕರಾವಳಿ ಜಿಲ್ಲೆಗಳಲ್ಲಿ ಉಪಕೃಷಿಯಾಗಿ ಬೆಳೆದು ರೈತರು ಹೆಚ್ಚಿನ ಲಾಭ ಪಡೆಯುತ್ತಿದ್ದರೆ, ಇತ್ತೀಚಿಗೆ ಈ ಬೆಳೆಗೆ ವ್ಯಾಪಕವಾಗಿ ಬಂದಿರುವ ಸೊರಗು ರೋಗ (wilt)ದ ಪರಿಣಾಮವಾಗಿ ಇಡೀ ಬಳ್ಳಿ ಒಣಗಿ ಇದರ ಕೃಷಿ ಇನ್ನಿಲ್ಲದಂತೆ ಮಾಯವಾಗುತ್ತಿದೆ. ಈ ಸಮಸ್ಯೆಗೆ ಪ್ರತಿರೋಧವಿರುವ ಸಸಿಗಳನ್ನು ಸೃಷ್ಟಿಸಿರುವ ಇಬ್ಬರು ತಳಮಟ್ಟದ ಸಸ್ಯ ಅಭಿವೃದ್ಧಿಗಾರರ ಸಾಹಸ ಕಥೆ ಇಲ್ಲಿದೆ.

ಬೆಳ್ತಂಗಡಿ ತಾಲೂಕಿನ ಅಮ್ಡಾಲು ರವಿಶಂಕರ್ ಭಟ್ಟರು ಒಂದು ಪ್ರತಿರೋಧವಿರುವ ಕಸಿ ಪದ್ಧತಿ ಹುಡುಕಿದ್ದಾರೆ. ಈ ಕಾಳು ಮೆಣಸು ಕಸಿ ಗಿಡ



ಸೊರಗು ರೋಗದಿಂದ ಮುಕ್ತವಾಗಿದೆ ಎಂದು ಸ್ವಾನುಭವದಿಂದ ಹೇಳುತ್ತಿರುವರು. ಕಸಿಗಿಡದ ಕಸಿಗೆ ಬಳಸುವ ಮಾತೃಗಿಡ ಕಾಡು ಹಿಪ್ಪಲಿಯದು *(Pepper longum, L)*. ರವಿಶಂಕರ್ ಗಿಡವನ್ನು ಬೇರು ಸಹಿತ ತಂದು,ಬರೇ ಮಣ್ಣು ತುಂಬಿದ ಪಾಲಿಥಿನ್ ಚೀಲದಲ್ಲಿ ನೆಟ್ಟು ನೀರೆರೆದು ಇನ್ನಾವ ಆರೈಕೆ ಇಲ್ಲದೇ ಬೆಳೆಸಿರುತ್ತಾರೆ. ಸಾಧಾರಣ ಕಾಳು ಮೆಣಸಿನ ಯಾವುದೇ ತಳಿಯ ಬಳ್ಳಿಯನ್ನು ಇದಕ್ಕೆ ಕಸಿ ಕಟ್ಟಬಹುದಂತೆ. ಇದಕ್ಕೆ ಆಂಗ್ಲ "V" ಆಕೃತಿಯಲ್ಲಿ ಸೀಳಿ ಕಸಿ ಮಾಡುವ ವಿಧಾನವೇ ಸೂಕ್ತವಾದದ್ದು ಎನ್ನುತ್ತಾರೆ ರವಿಶಂಕರ್. ಹೂ ಬಿಡಲು ಸಿದ್ಧವಾದ ಕೊಂಬೆಯನ್ನು ಕಡ್ಡಿ ಗಿಡವಾಗಿ *(Scion)* ಕಸಿಗೆ ಬಳಸಿದರೆ ಅದೇ ವರ್ಷ ಕಾಳು ಮೆಣಸಿನ ಕೊಂಬುಗಳು ಜೋತಾಡಿ ಮುಂದೆ ಬಳ್ಳಿ ಮರವೇರಿ ಬೆಳೆಯುತ್ತದೆಯಂತೆ. ಮಾತೃ ಗುಣದಿಂದಾಗಿ ಬೇರಿನ ಮೂಲಕ ಬರುವ ಸೊರಗು ಬಾಧೆಯಿಂದ ಇವು ಮುಕ್ತವಾಗಿರುತ್ತವೆ. ಕಸಿಕಟ್ಟಿ ಒಂದೆರಡು ತಿಂಗಳ ಕಾಲ ದಿನದಲ್ಲಿ ಮೂರು ಸಲ ನೀರು ಸಿಂಪಡಿಸಿ ಗಿಡ ತಂಪಾಗಿರುವಂತೆ ಮಾಡಬೇಕು. ನೆರಳಿನಲ್ಲೇ ಇಡಬೇಕು. ಇಂತಹ ಕಸಿ ಸಸ್ಯಗಳು ರೋಗಮುಕ್ತ ಎಂಬ ವಿಶ್ವಾಸ ರವಿಶಂಕರ್‌ರವರಿಗೆ.

ಇದೇ ರೀತಿ ಕೇರಳದ ಕೊಚ್ಚಿಕ್ಕೋಡ್ ಕಾಡುಕಮ್ಮಕನ್‌ನ ಅಬ್ರಾಹಂರವರು ಅಧಿಕ ಇಳುವರಿಯ ಮತ್ತೊಂದು ಹೊಸ ಕಾಳುಮೆಣಸು ತಳಿಯನ್ನು ಅಭಿವೃದ್ಧಿ ಪಡಿಸಿದ್ದಾರೆ. ಇವರು ತಳಿ ಅಭಿವೃದ್ಧಿಯನ್ನು ಅಂಪಿರಿಯನ್ ಎಂಬ ಹೆಣ್ಣು ಮೂಲತಳಿಗೆ, ಇನ್ನೊಂದು ಹೆಸರಿರದ ಸ್ಥಳೀಯ ಗಂಡು ಮೂಲ ತಳಿಯ ಪರಾಗಸ್ಪರ್ಶ ಮಾಡುವ ಮೂಲಕ ಸಾಧಿಸಿದ್ದಾರೆ. ಈ ಉತ್ತಮ ಗುಣ ಮಟ್ಟದ ಕಾಳುಮೆಣಸು ತಳಿ ಕೂಡ ಬೇರು ಸೊರಗು ನಿರೋಧಕವಾಗಿದ್ದು ಇದಕ್ಕೆ "ಕಾಡುಕ್ಕುಮಕತ್" ಎಂದು ಹೆಸರಿಸಿದ್ದಾರೆ. ಈ ತಳಿ ಮಧ್ಯಮ ಗಾತ್ರದ ಕಾಯಿಗಳನ್ನು ನೀಡುವುದಲ್ಲದೆ, ಒಣಗಿಸಿದಾಗ ವ್ಯಾಪಾರಕ್ಕೆ ಹೊಂದುವ ಕಪ್ಪು ಬಣ್ಣ ನೀಡುವುದರಿಂದ ಹೆಚ್ಚು ಜನಪ್ರಿಯ.

ಮೂಲ: ಹನಿಬೀ, VOL 17(3), ಸೆಪ್ಟಂಬರ್ 2006, ಪುಟ 14

ಕೃಷಿ ಸೀ.ಡಿ.ಗಳು

ಕೃಷಿಯನ್ನು ನೋಡಿ ಮಾಡುವುದೇ ಉತ್ತಮ ವಿಧಾನ. ಆದರೆ ಎಲ್ಲಾ ಕಡೆ ಓಡಾಡಿ ನೋಡಿ ತಿಳಿಯುವುದು ದುಭಾರಿ. ಈ ನೋಡಿ ಕಲಿ ಉದ್ದೇಶಕ್ಕೆ ವಿಡಿಯೋ ಚಿತ್ರ ತುಂಬ ಅನುಕೂಲ. ಈ ನಿಟ್ಟಿನಲ್ಲಿ ಶಿರಸಿಯ ಹೊಸಗದ್ದೆ ಡಾ.ವೆಂಕಟ್ರಮಣ ಹೆಗಡೆಯವರು, ತಮ್ಮ ಶ್ರಮ ಜೀವಿ ಅಗ್ರಿ ಫಿಲ್ಮ್ಸ್ ಲಾಂಛನದಡಿಯಲ್ಲಿ ಕಳೆದೆರಡು ವರ್ಷಗಳಿಂದ ಪ್ರಯತ್ನ ಶೀಲರಾಗಿದ್ದಾರೆ. ಇವರು ವಾಣಿಜ್ಯ ಹೈನುಗಾರಿಕೆ, ಸಮೃದ್ಧ ಹೈನಿಗೆ ಪೌಷ್ಟಿಕ ಮೇವು, ಹೈಟೆಕ್ ಕೃಷಿ, ಕಸಿ ವಿಧಾನಗಳು ಎಂಬ ನಾಲ್ಕು ಸೀ. ಡಿ.ಗಳನ್ನು ಹೊರತಂದಿದ್ದಾರೆ.

ವಾಣಿಜ್ಯ ಹೈನುಗಾರಿಕೆ : ಪ್ರಮುಖ ಆಕಳು ಎಮ್ಮೆಗಳ ತಳಿಗಳು, ಅವುಗಳ ಸಾಕಣೆ, ಆರೋಗ್ಯ ರಕ್ಷಣೆ, ಕೊಟ್ಟಿಗೆ ನಿರ್ಮಾಣ, ಹಿಂಡಿ ಮಿಶ್ರಣ ಸ್ವತಃ ತಯಾರಿಸುವುದು ಮತ್ತು ಮೇವು ನಿರ್ವಹಣೆಯ ಕುರಿತು ವಿವರವಾಗಿ ಚಿತ್ರಿಸಲಾಗಿದೆ. ಹವ್ಯಾಸಿ ಹೈನುಗಾರರ ದೇಶೀ ತಳಿಗಳು ಚಿತ್ರದಲ್ಲಿ ನುಸುಳಿಲ್ಲ.

ಪೌಷ್ಟಿಕ ಮೇವು : ಮೇವು ಬೆಳೆ ತಳಿಗಳು, ನೂರು ಸಾವಿರ ಸಂಖ್ಯೆಯಲ್ಲಿವೆ. ಅವುಗಳಲ್ಲಿ ಯಾವುದು ಉತ್ಕೃಷ್ಟ ಮತ್ತು ಯಾಕಾಗಿ? ಅವುಗಳ ಬೆಳೆ, ಬಳಕೆ ಮತ್ತಿತರ ವಿವರಗಳು ಇದರಲ್ಲಿ ಲಭ್ಯ.

ಹೈಟೆಕ್ ಕೃಷಿ : ಅತ್ಯಂತ ಯಶಸ್ವಿಯಾದರೂ ಬಹುತೇಕ ಕೃಷಿಕರಿಗೆ ಪರಿಚಯವಾಗದೇ ಉಳಿದಿರುವ ಯಂತ್ರಗಳನ್ನು ಇದರಲ್ಲಿ ವಿವರವಾಗಿ ಚಿತ್ರಿಸಲಾಗಿದೆ. ಹಾಲು ಕರೆಯುವ ಯಂತ್ರ, ವಿದ್ಯುತ್ ಬೇಲಿ, ಸೌರವಿದ್ಯುತ್ ಚಾಲಿತ ಪಂಪ್ ಸೆಟ್, ಅಸ್ತ್ರ ಡ್ರೈಯರ್, ಇವುಗಳ ವಿವರವಿದೆ.

ಕಸಿವಿಧಾನಗಳು: ಕಸಿ ಕಟ್ಟುವ ಕುರಿತು ಪುಸ್ತಕ ಓದಿದರೆ ಕರಿಹಲಗೆಯ ಮೇಲೆ ಈಜು ಕಲಿತಂತಾಗುತ್ತದೆ. ಎಲ್ಲ ಸಂದರ್ಭಗಳಲ್ಲಿ ಪ್ರತ್ಯಕ್ಷ ಕಸಿ ಕಟ್ಟಿ ಕಲಿಯುವುದು ಕಷ್ಟ ಈ ಕಸಿ ಸೀ.ಡಿ ನೋಡಿ ಹೊಸಬರು ಕೂಡ ಕಟ್ಟಲು ಕಲಿಯಬಹುದು. ಕೃಷಿ ತರಬೇತಿದಾರರು, ಸಂಸ್ಥೆಗಳಿಗೆ ಹೇಳಿ ಮಾಡಿಸಿದಂತಿದೆ. ಪ್ರತಿ ಸೀ.ಡಿ. ಬೆಲೆ ರೂ. 125/- ಅಂಚೆ ವೆಚ್ಚ ರೂ.25/

ವಿಳಾಸ :
ಡಾ. ವೆಂಕಟ್ರಮಣ ಹೆಗಡೆ, ಶ್ರಮಜೀವಿ ಅಗ್ರಿ ಫಿಲ್ಮ್ಸ್, ಹೊಸಗದ್ದೆ
ಅಂಚೆ : ಮಂಜುಗುಣಿ, ಶಿರಸಿ, ಉತ್ತರ ಕನ್ನಡ -581315

ಔಷಧಿ ಮತ್ತು ಸುಗಂಧ ದ್ರವ್ಯ ಬೆಳೆಗಳು

ಲೇಖಕ : ಡಾ.ಬಿ.ಸಿ. ಸೂರ್ಯನಾರಾಯಣ, ಪ್ರಕಾಶನ : ಸುರಭಿ ಪ್ರಕಾಶನ, ನಂ,341, 6ನೇ ಮುಖ್ಯರಸ್ತೆ, ಬಿಎಚ್‌ಸಿಎಸ್ ಲೇ ಔಟ್, ಚಿಕ್ಕಲಸಂದ್ರ, ಉತ್ತರ ಹಳ್ಳಿ ರಸ್ತೆ, ಬೆಂಗಳೂರು, 560 061 ಪುಟ : 108 + 6, ಬೆಲೆ: ರೂ 100.

ಜಾಗತಿಕ ಮಾರುಕಟ್ಟೆಯಲ್ಲಿ ಔಷಧೀಯ ಹಾಗೂ ಸುಗಂಧ ದ್ರವ್ಯಗಳಿಗೆ ಬೇಡಿಕೆ ಹೆಚ್ಚುತ್ತಿರುವುದರಿಂದ, ಈ ಬೆಳೆಗಳ ವಾಣಿಜ್ಯೀಕರಣ ಆರಂಭವಾಗಿದೆ. ಇಂದು ವಿಶ್ವದಲ್ಲಿ ಸುಮಾರು 14 ಬಿಲಿಯನ್ ಡಾಲರುಗಳಷ್ಟು ಬೆಲೆಯ ಔಷಧೀಯ ಸಸ್ಯ ಉತ್ಪನ್ನಗಳಿಗೆ ಬೇಡಿಕೆಯಿದ್ದು 2050 ನೇ ಇಸವಿಯ ವೇಳೆಗೆ 100 ಬಿಲಿಯನ್ ಡಾಲರು ಮುಟ್ಟುವ ಅಂದಾಜಿದೆ. ವಿಶ್ವ ಔಷಧೀಯ ಸಸ್ಯ ಉತ್ಪನ್ನಗಳ ಮಾರುಕಟ್ಟೆಯಲ್ಲಿ ಭಾರತದ ಪಾಲು ಅತಿ ಕಡಿಮೆ. ಔಷಧಿ ಮತ್ತು ಸುಗಂಧ ದ್ರವ್ಯ ಬೆಳೆ ಬೆಳೆಯಲು ಕೃಷಿಕರು ಈಗ ಹೆಚ್ಚಿನ ಆಸಕ್ತಿ ತೋರಿಸುತ್ತಿದ್ದಾರೆ. ಕೃಷಿ ಉತ್ಪನ್ನಗಳ ಬೆಲೆ ಏರಿಳಿತಗಳಿಂದ ತತ್ತರಿಸಿರುವ ರೈತರಿಗೆ ಲಾಭದಾಯಕ ಬೆಳೆಗಳಲ್ಲಿ ವಾಣಿಜ್ಯ ದೃಷ್ಟಿಯಿಂದ ಮುಖ್ಯವಾದ ಹಲವು ಬೆಳೆಗಳ ಕೃಷಿಯ ಬಗ್ಗೆ ಮರು ಖರೀದಿ ಒಪ್ಪಂದದ ಬಗ್ಗೆ ವಿಸ್ತಾರವಾಗಿ ಈ ಪುಸ್ತಕದಲ್ಲಿ ಪ್ರಸ್ತಾಪಿಸಲಾಗಿದೆ. ಸಮಗ್ರ ಮಾಹಿತಿಯನ್ನು ನೀಡುವ ಉಪಯುಕ್ತ ಪುಸ್ತಕವಿದು.

ಕೃಷಿ ಪಂಡಿತ ಚೇರ್ಕಾಡಿ ರಾಮಚಂದ್ರರಾಯರು (ಜೀವನ ಮತ್ತು ಸಾಧನೆ)

ಲೇಖಕರು : ಆರೂರು ಮಂಜುನಾಥ ರಾವ್ , ಪುಟ:119, ಬೆಲೆ ರೂ 50.
ಪ್ರಕಾಶಕರು : ಭಾರತೀಯ ವಿಕಾಸ ಟ್ರಸ್ಟ್, ಮಣಿಪಾಲ, ಉಡುಪಿ-576102,

ಈ ಪುಸ್ತಕವು ಕರ್ನಾಟಕದ ಕರಾವಳಿ ತೀರದ ಗಾಂಧೀವಾದಿ, ಕೃಷಿಯಲ್ಲಿ ಸ್ವಾವಲಂಬನೆಯ ಕನಸು ನನಸಾಗಿಸಿಕೊಂಡ ಚೇರ್ಕಾಡಿ ರಾಮಚಂದ್ರರಾಯರ ಜೀವನ, ಅವರ ಸಾಧನೆಯ ಮೈಲುಗಲ್ಲು, ದೊರೆತ ಬಹುಮಾನಗಳು, ದಿನಪತ್ರಿಕೆ ಹಾಗೂ ನಿಯತ ಕಾಲಿಕೆಗಳಲ್ಲಿ ಪ್ರಕಟಗೊಂಡ ವಿಚಾರಗಳು ಈ ಕುರಿತು ಮಾಹಿತಿಯನ್ನು ನೀಡುತ್ತದೆ. ಲೇಖಕರು ರಾಯರ ಮಗನಾಗಿದ್ದು ತನ್ನ ತಂದೆಯ ಬಾಲ್ಯದ, ಹದಿಹರೆಯದ, ತಾರುಣ್ಯ, ಮಧ್ಯೆ ಹಾಗೂ ನಿವೃತ್ತಿ ವಯಸ್ಸಿನ ಜೀವನದ ಕುರಿತು ರಕ್ತಗತವಾಗಿ ತಿಳಿದಿರುವುದರಿಂದ ರಾಯರ ಕುರಿತು ಸಮಗ್ರ ಮಾಹಿತಿಯನ್ನು ನೀಡಿರುತ್ತಾರೆ. ಈ ಪುಸ್ತಕದಲ್ಲಿ ಬರುವ ನಿರುದ್ಯೋಗ ಮತ್ತು ಬಡತನ ನಿವಾರಣೋಪಾಯದಲ್ಲಿ ಯಶಸ್ಸನ್ನು ಕಂಡ ರಾಯರ ಸಾಧನೆಗಳ ಪರಿಚಯ ಲೇಖನದಲ್ಲಿ ಸರ್ವೋದಯ ಭತ್ತದ ಕೃಷಿ ಬೆಳೆಯುವ ವಿಧಾನ , ಒಬ್ಬ ಯಶಸ್ವಿ ಕೃಷಿಕ ತನ್ನ ಅಲ್ಪ ಜಮೀನಿನಲ್ಲಿ ಸ್ವಾವಲಂಬನೆಯಿಂದ ಅಧಿಕ ಇಳುವರಿ ಹಾಗೂ ಆದಾಯವನ್ನು ಪಡೆಯುವ ರಹಸ್ಯವನ್ನು ರಾಯರು ಕಂಡು ಕೊಂಡ ಬಗೆಯನ್ನು ಲೇಖಕರು ತಿಳಿಸಿರುತ್ತಾರೆ.

ಸರ್ವೋದಯ ಭತ್ತದ ಕೃಷಿ

ಈ ಸರ್ವೋದಯ ಭತ್ತದ ಕೃಷಿಯಲ್ಲಿ ಮೊದಲಸಲ ನೆಲ ಗಟ್ಟಿಯಾಗಿದ್ದರೆ ನೇಗಿಲಿನಲ್ಲಿ ಉಳುಮೆ ಮಾಡಬಹುದು. ಆನಂತರದ ವರ್ಷಗಳಲ್ಲಿ ಉಳುಮೆಯ ಅಗತ್ಯ ಇರುವುದಿಲ್ಲ. ಅನಗತ್ಯದ ಕಸ, ಬೇರು, ಕಡ್ಡಿಗಳನ್ನು ತೆಗೆದು ಮಣ್ಣನ್ನು ಶುಚಿಗೊಳಿಸಿ, ಎರಡು ಇಂಚು ಆಳವುಳ್ಳ ಸಾಲುಗಳನ್ನು ರಚಿಸಬೇಕು. ಒಂದು ಸಾಲಿನಿಂದ ಇನ್ನೊಂದು ಸಾಲಿಗೆ ಇಪ್ಪತ್ತೆರಡು ಇಂಚು ಅಂತರ ಸಾಕು. ಒಂದು ಸೆಂಟ್ ಜಾಗದಲ್ಲಿ ಹದಿನೈದು ಅಡಿ ಉದ್ದದ 16 ಸಾಲು ಬರುತ್ತವೆ. ಸಾಲಿನ ಹೊಂಡದಲ್ಲಿ ಸಿದ್ಧ ಮಾಡಿ ಕೊಂಡ ಹುಡಿಗೊಬ್ಬರ, ಬೂದಿ ಹಾಕಿ ಸಾಧಾರಣ ಏಳೆಂಟು ಆಳ ಕೊಚ್ಚಿ ಇರಿಸಿಕೊಳ್ಳಬೇಕು. ಪ್ರತ್ಯೇಕ ಪಾತಿಗಳಲ್ಲಿ ಬೆಳೆಸಿದ, ಮೂವತ್ತು ದಿನಗಳ ಸಸಿಗಳು ಮಳೆಗಾಲ ಪ್ರಾರಂಭವಾಗುವಾಗ ನೆಡಲು ಯೋಗ್ಯವಾಗುತ್ತವೆ. ಜೂನ್ ತಿಂಗಳಲ್ಲಿ ಮೊದಲೇ ತಯಾರು ಮಾಡಿಕೊಂಡ ಸಾಲುಗಳಲ್ಲಿ ಎಂಟು ಇಂಚು ಅಂತರದಲ್ಲಿ ಎರಡೆರಡು ಸಸಿಗಳನ್ನು ನಾಟಿ ಮಾಡಬೇಕು. ಹದಿನೈದು ದಿನಗಳ ಬಳಿಕ ಬೇಗ ಕೊಳೆಯುವ ಹಸಿ ಸೊಪ್ಪುಗಳನ್ನು ಸಸಿಯ ಎರಡೂ ಬದಿಗಳಲ್ಲಿ ಇಟ್ಟು ಎರಡು ದಿನ ಕೊಳೆತ ಸಗಣಿ ನೀರು, ನೆಲಕಡಲೆ ಹಿಂಡಿ, ನೀರು ಕೊಡುವುದು ಸೂಕ್ತ ಕ್ರಮ. ಇದಾದ ಒಂದು ತಿಂಗಳಲ್ಲಿ ಸಾಮಾನ್ಯ ಎಂಟರಿಂದ ಹತ್ತು ತೆಂಡೆ ಬರುತ್ತವೆ. ಆಗ ಮತ್ತೊಮ್ಮೆ ಹುಡಿಗೊಬ್ಬರ, ಕೊಳೆತ ಸಗಣಿ ನೀರು, ನೆಲಗಡಲೆ ನೀರು ಕೊಟ್ಟು ಮೊದಲು ಎತ್ತರವಿದ್ದ ಜಾಗದ ಮಣ್ಣನ್ನು ರೇಸಿ ಗಿಡದ ಬುಡಕ್ಕೆ ಹಾಕಬೇಕು. ಆಗ ನೆಲ ಸಮತಟ್ಟಾಗುತ್ತದೆ. ಸಾಧಾರಣ ನೂರಿಪ್ಪತ್ತು ದಿವಸಗಳಲ್ಲಿ ಭತ್ತ ಕಟಾವಿಗೆ ಸಿದ್ಧವಾಗುತ್ತದೆ. ಎಕರೆಗೆ 16 ರಿಂದ 18 ಕ್ವಿಂಟಾಲ್ ಇಳುವರಿ ಈ ಪದ್ಧತಿಯಿಂದ ಪಡೆದು ಸಾಧಿಸಿ ತೋರಿಸಿರುವರು.

ಹಿತ್ತಲಗಿಡದ ಇದುವರೆಗಿನ ಬಹುತೇಕ ಹಳೆ ಸಂಚಿಕೆಗಳು ಲಭ್ಯವಿರುತ್ತವೆ. ರೂ. 650/- ಪಾವತಿ ಮಾಡಿ ಪಡೆದು ಕೊಳ್ಳಬಹುದು. ಆಸಕ್ತರು ಮನಿ ಆರ್ಡರ್ ಅಥವಾ ಡಿ.ಡಿ. ಕಳಿಸಿ. ಅಂಚೆ ವೆಚ್ಚ ಉಚಿತ.

ದ್ರವ ಗೊಬ್ಬರ - ಸಗಣಿ ಡಿಕಾಕ್ಷನ್

ಕೊಟ್ಟಿಗೆಯಿಂದ ಬರುವ ಗೊಬ್ಬರ ದ್ರವ್ಯಗಳನ್ನು ನೇರವಾಗಿ ಪೈಪ್ ಮೂಲಕ ಸಾಗಿಸಲು ಸಾಧ್ಯವಿಲ್ಲ. ಅದನ್ನು ಪ್ರತ್ಯೇಕ ಕೊಳದಲ್ಲಿ ಸೋಸು-ಕವಾಟಗಳ ಮೂಲಕ ಹಾಯಿಸಿ ಸಾರಯುಕ್ತ ತಿಳಿಜಲವನ್ನು ತೋಟಕ್ಕೆ ಸಾಗಿಸುವ ಸರಳ ವಿಧಾನವನ್ನು ಪುತ್ತೂರು ತಾಲೂಕು ಸವಣೂರಿನ ಎಡಪತ್ಯ ರಾಮಚಂದ್ರರಾವ್ ರೂಢಿಸಿಕೊಂಡಿದ್ದಾರೆ.

ಸಗಣಿ ಸ್ಲರಿ ದಪ್ಪ, ಅದರ ಮೆದುಗಳಿ, ಜೊತೆಗೆ ಕಸಕಡ್ಡಿ ತೊಂದರೆಯ ತವರು. ತೋಟಕ್ಕೆ ರವಾನಿಸಲು ದೊಡ್ಡ ಗಾತ್ರದ ಕೊಳವೆಗಳು ಬೇಕು, ಹೊಸ ಪೈಪ್‌ಗಳಲ್ಲಿ ವಿತರಿಸಬೇಕು. ಇನ್ನು ಸ್ಪ್ರಿಂಕ್ಲರ್ ಬಳಸಿ ಸಿಂಪಡಿಸಬೇಕಾದರೆ ಸ್ಪ್ರಿಂಕ್ಲರ್‌ಗಳ ವಿನ್ಯಾಸವನ್ನೇ ಬದಲಿಸಬೇಕು. ಪ್ರತ್ಯೇಕ ಕೊಳವೆ ಮಾರ್ಗ ಹಾಕಬೇಕು. ಇದಕ್ಕೆ ರಾಮಚಂದ್ರರಾವ್ ಕಂಡುಹಿಡಿದಿರುವ ವಿಧಾನ ಸರಳವಾಗಿದೆ. ಮೂರು ಅಡಿ ಅಗಲ, 25 ಅಡಿ ಉದ್ದ, ಮೂರುವರೆ ಅಡಿ ಆಳದ ಕಾಂಕ್ರೀಟ್ ರಚನೆ, ಎಂಟು ಕೋಣೆಗಳನ್ನು ವಿಭಾಗಿಸಲು ಸಮಾನ ಅಳತೆಯ ತಡೆಗೋಡೆಗಳನ್ನು ಮೊದಲು ರಚಿಸಬೇಕು. ತಡೆಗೋಡೆಯ ಕೆಳಭಾಗ ಎರಡು ಇಂಚು ತಗ್ಗಿರಬೇಕು. ಒಂದನೇ ಕೋಣೆಯಿಂದ ಎರಡನೇ ಕೋಣೆಗೆ ತಳಭಾಗದಿಂದ ಹರಿದ ಸ್ಲರಿ ಎರಡನೇ ಕೋಣೆಯಲ್ಲಿ ಶೇಖರಗೊಂಡು, ತಡೆಗೋಡೆಯ ಮೇಲಂಚನ್ನು ಹಾದು ಮೂರನೇ ಕೋಣೆಯಲ್ಲಿ ತಡೆಗೋಡೆಯ ತಳ ಪುನಃ ಎರಡಿಂಚು ತೆರೆಯಬೇಕು. ಅದರ ಮೂಲಕ ಸ್ಲರಿ ನಾಲ್ಕನೇ ಕೋಣೆಗೆ ....ಹೀಗೆ ಪ್ರಕ್ರಿಯೆ ಮುಂದುವರಿಯುತ್ತದೆ.


ಒಂದನೇ ಕೋಣೆಯಿಂದ ಎರಡನೇ ಕೋಣೆಗೆ ಸ್ಲರಿ ಹರಿಯುವಾಗ, ಸ್ಲರಿಯ ತೇಲುವ ತ್ಯಾಜ್ಯಗಳು ಒಂದರಲ್ಲೇ ಉಳಿಯುತ್ತವೆ. ಮುಳುಗುವ ತ್ಯಾಜ್ಯಗಳು ಎರಡನೇ ಕೋಣೆಯ ತಳಭಾಗದಲ್ಲಿ ಶೇಖರಗೊಳ್ಳುತ್ತವೆ. ಪುನಃ ಮೂರನೇ ಕೋಣೆಯಲ್ಲಿ ತೇಲುವ ತ್ಯಾಜ್ಯಗಳು ಹೀಗೆ ಹಂತಹಂತವಾಗಿ ಸ್ಲರಿ ಸೋಸುತ್ತಾ ಹೋಗಿ ಎಂಟನೇ ಕೋಣೆಗೆ ತಲುಪುವಾಗ ಸ್ಲರಿ ಸಂಪೂರ್ಣ ತ್ಯಾಜ್ಯ ಮುಕ್ತ ಟ್ಯಾಂಕ್‌ನಲ್ಲಿ ಸಂಗ್ರಹವಾಗುತ್ತದೆ. ಈ ಟ್ಯಾಂಕ್‌ನಿಂದ ನೀರಿನ ಕೊಳವೆ ಜಾಲದ ಮೂಲಕ ತೋಟಕ್ಕೆ ರವಾನೆಯಾಗುತ್ತದೆ. ಇವರ ತೋಟದಲ್ಲಿ ಎರಡು ಬಯೋಗ್ಯಾಸ್ ಸ್ಥಾವರದ ಸಿದ್ಧತೆ ನಡೆದಿದೆ. ಕೊಟ್ಟಿಗೆಯ ಸಂಪನ್ಮೂಲಗಳು ಎರಡು ಸ್ಥಾವರಕ್ಕೆ ಧಾರಾಳ ಸಾಕು. ವಾರಕ್ಕೊಮ್ಮೆ ಕೋಣೆಗಳಿಂದ ಕಸ ಕಡ್ಡಿಗಳನ್ನು ಅದಕ್ಕಾಗಿಯೇ ಮೀಸಲಿಟ್ಟ ಪೈಪ್ ಮೂಲಕ ಫ್ಲಶ್ ಮಾಡಿಕೊಂಡರೆ ಸಾಕು ಎನ್ನುತ್ತಾರೆ ರಾಯರು. ದನದ ಸಗಣಿಯನ್ನು ಸಮರ್ಪಕವಾಗಿ ದ್ರವ ಗೊಬ್ಬರವನ್ನಾಗಿ ಬಳಸುವಲ್ಲಿ ರಾಮಚಂದ್ರರಾಯರು ಈ ರೀತಿ ಯಶಸ್ವಿಯಾಗಿದ್ದಾರೆ.

ಸಾವಯವ ಕೃಷಿಯಲ್ಲಿ ಜೊಂಡಿನ ಬಳಕೆ

ಶಿರಸಿಯ ಒಣಿಕೇರಿಯ ಬೆಂಗಳಿ ವೆಂಕಟೇಶ್‌ರವರು ಕೃಷಿ ಕೆಲಸ ಪ್ರಾರಂಭಿಸಿದ ದಿನಗಳಲ್ಲಿ ತೋಟದ ಮಣ್ಣು ಮುಚ್ಚಲು ಹೊದಿಕೆಗಾಗಿ ಹಾಗೂ ಗೊಬ್ಬರಕ್ಕೆಂದು ದೂರದಿಂದ ಸೊಪ್ಪು ಸದೆ ಮುಂತಾದ ಕಚ್ಚಾ ವಸ್ತುಗಳನ್ನು ಹೊತ್ತು ತರುವುದು ಶ್ರಮದಾಯಕ ಹಾಗೂ ವೆಚ್ಚದ ಬಾಬ್ತು ಎಂದು ತೋಟದ ಮುಚ್ಚಿಗೆಗೆ ಕೆರೆಯ ಜೊಂಡನ್ನೇ ಬಳಸಿ ಯಶಸ್ಸು ಪಡೆದಿದ್ದಾರೆ. ಇದರಿಂದ ಮಣ್ಣಿನಲ್ಲಿ ಎರೆಹುಳುವಿನ ಪ್ರಮಾಣವೂ ಹೆಚ್ಚಿತ್ತು. ಈ ಜೊಂಡು, ಮಣ್ಣಿನ ಸವಕಳಿ ಕಡಿಮೆ ಮಾಡುತ್ತದೆ. ತೋಟದಲ್ಲಿ ತೇವಾಂಶ ಹೆಚ್ಚಿ, ಕಳೆ ನಿವಾರಣೆಯಾಗಿದೆಯಂತೆ. ಜೊತೆಗೆ ಜೊಂಡನ್ನು ಬಳಸಿ ಗುಂಡಿ ಅಥವಾ ಕಲ್ಲಿನ ತೊಟ್ಟಿಯಲ್ಲಿ ಕಾಂಪೋಸ್ಟ್ ಮಾಡಬಹುದು. ಒಣಗಿಸಿದ ಜೊಂಡನ್ನೇ ಬಳಸಬೇಕು. ಪದರು ಪದರಾಗಿ ಜೊಂಡನ್ನು ಹರಡಿ, ಸ್ಲರಿಯ ನೀರಿನಿಂದ ತೋಯಿಸಬೇಕು. ಮೆಂತೆ ಹಿಟ್ಟನ್ನು ಇದಕ್ಕೆ ಉದುರಿಸಿದರೆ ಇನ್ನೂ ಉತ್ತಮ ಎನ್ನುತ್ತಾರೆ ವೆಂಕಟೇಶ. ಇದರಿಂದ 60-90 ದಿನಗಳಲ್ಲಿ ಜೊಂಡು ಪುಡಿಯಾಗಿ ನಂತರ ಎರೆಹುಳು ಸೇರಿಸಿ ಗೊಬ್ಬರ ಮಾಡಬಹುದಂತೆ.

ಶ್ರೀಪಾದರ ತೂಗು ಜಾಲರಿ

ಸಾವಯವ ಕೃಷಿಯಲ್ಲಿ ಎರೆಗೊಬ್ಬರದ ಮಹತ್ವ ಅರಿತ ಸಾಗರ ತಾಲೂಕು ಮಾವಿನಸರದ ಶ್ರೀಪಾದರಾಯರು ಎರೆಗೊಬ್ಬರ ಘಟಕ ನಿರ್ಮಿಸಿದ್ದಾರೆ. ಇದು 30 ಅಡಿಉದ್ದ, 4x4 ಅಡಿ ಅಗಲವಾಗಿದೆ.



ಪ್ರತಿ ವಾರ ಮೂರು ಕ್ವಿಂಟಾಲ್ ಎರೆ ಗೊಬ್ಬರ ಪಡೆಯುತ್ತಿದ್ದಾರೆ. ಎರೆಹುಳು ಪೂರ್ಣ ಪ್ರಮಾಣದಲ್ಲಿ ಗೊಬ್ಬರ ತಯಾರಿಸಿರುವುದಿಲ್ಲ. ಸ್ವಲ್ಪ ಪ್ರಮಾಣದಲ್ಲಿ ಕೊಳೆತ ಕಸಕಡ್ಡಿ ಇದ್ದೇ ಇರುತ್ತದೆ. ಗೊಬ್ಬರವನ್ನು ಕಸ ಕಡ್ಡಿಯಿಂದ ಬೇರ್ಪಡಿಸಲು ಶ್ರೀಪಾದರಾಯರು ಒಂದು ಜಾಲರಿ ಬಳಸುತ್ತಾರೆ. ಈ ಜಾಲರಿ ದೊಡ್ಡ ಗಾತ್ರದ ಮೆಶ್ ಹೊಂದಿರುತ್ತದೆ. ಈ 4x4 ಅಡಿ ಅಗಲದ ಜಾಲರಿಯ ನಾಲ್ಕು ಮೂಲೆಗೆ ಹಗ್ಗದಿಂದ ಕಟ್ಟಿ ತೂಗು ಹಾಕಿ ಸೋಸಿದರೆ ದೈಹಿಕ ಶ್ರಮ ಕಡಿಮೆಯಾಗುತ್ತದೆನ್ನುವರು. ಇದನ್ನು ಒಬ್ಬರೇ ನಿರ್ವಹಿಸಬಹುದೆನ್ನುವ ರಾಯರು ಕೆಲಸದ ಬಳಿಕ ತೂಗಾಡುವ ಜಾಲರಿಯನ್ನು ಒಂದೆಡೆ ಗೋಡೆಗೆ ಜೋಡಿಸಿದರೆ ಸ್ಥಳದ ಉಳಿತಾಯವೂ ಆಗುವುದೆನ್ನುವರು.

(ಈ ಅನುಶೋಧನೆಗಳನ್ನು ರಾಷ್ಟ್ರೀಯ ಅನುಶೋಧನಾ ಪ್ರತಿಷ್ಠಾನದ ಐದನೇ ಸುತ್ತಿಗೆ ಕಳುಹಿಸಿ ಕೊಡಲಾಗುವುದು.)

ಕಲ್ಲರ್ ಭೂಮಿಯ ಯಶಸ್ವಿ ಸಾಗುವಳಿ

ಕಲ್ಲರ್ ಭೂಮಿಯ ಮಣ್ಣು ಕಪ್ಪು. ಇಲ್ಲಿ ಬಿದ್ದ ಮಳೆ ನೀರು ಭೂಮಿ ಆಳಕ್ಕೆ ಇಳಿಯುವುದಿಲ್ಲ. ಮಳೆನೀರಿನೊಂದಿಗೆ ಸಂಪರ್ಕ ಏರ್ಪಟ್ಟ ತಕ್ಷಣವೇ ಭೂಮಿಯ ಮೇಲ್ಪದರು ನೀರನ್ನು ಹೀರಿಕೊಳ್ಳದೇ ಹರಿಬಿಡುತ್ತದೆ. ಮೇಲ್ನೋಟಕ್ಕೆ ಭೂಮಿ ಹಸಿಯಾದಂತೆಯೇ ಕಂಡರೂ ವಾಸ್ತವದಲ್ಲಿ ಹಾಗೇನೂ ಇರುವುದಿಲ್ಲ. ಈ ಸಮಸ್ಯೆಗೆ ಕೊಪ್ಪಳ ಜಿಲ್ಲೆ ಬಿನ್ನಾಳದ ಸಂಗಯ್ಯ ಭೂಸನೂರಮಠ ಇವರು ಕಲ್ಲರ್ ಜಮೀನಿಗೆ ಮರಳನ್ನು ಸೇರಿಸಿದರೆ ಜಮೀನಲ್ಲಿ ತೇವ ಉಳಿಯುತ್ತದೆ ಎಂಬ ತರ್ಕದೊಂದಿಗೆ ಪ್ರಯೋಗ ಆರಂಭಿಸಿದರು. ಇವರು ಬಳಸುವ ಮರಳು ಸಣ್ಣದ ಕಲ್ಲಿನಂತಹ ಹರಳು. ಒಂದು ಎಕರೆಗೆ 150 ಟ್ರ್ಯಾಕ್ಟರ್ ಲೋಡ್ ಮರಳು ಬೇಕಾಗುತ್ತದಂತೆ. ಇಡೀ ಒಂದು ಎಕರೆ ಜಮೀನಿನಲ್ಲಿ ಸುಮಾರು ನಾಲ್ಕು ಇಂಚು ದಪ್ಪನೆಯ ಹಾಸಿಗೆಯಂತೆ ಹರಡಬೇಕು. ಮಳೆ ನೀರು ಈ ಹೊದಿಕೆಯ ಮೂಲಕ ಭೂಮಿಯ ಒಳಪದರುಗಳಿಗೆ ಇಳಿಯುವಂತೆ ಮಾಡುವುದು ಮತ್ತು ಅದೇ ಹೊತ್ತಿಗೆ ಭೂಮಿಯ ತೇವಾಂಶ ಆವಿರೂಪದಲ್ಲಿ ಹಾಳಾಗುವುದನ್ನು ತಡೆಗಟ್ಟುವುದು. ಈ ಮರಳು ಹೊದಿಕೆ ಹೀರು ಬಟ್ಟೆಯಂತೆ ಕೆಲಸ ಮಾಡುವುದು.

ಇದರಿಂದ ಮಣ್ಣು, ನೀರು ಕೊಚ್ಚಿ ಹೋಗದಂತೆ ತಡೆಯಬಹುದು ಎನ್ನುತ್ತಾರೆ. ಭೂಮಿ ಸಂಪೂರ್ಣಹಸಿಯಾಗಿದ್ದು ಪೈರಿಗೆ ಚೈತನ್ಯ ನೀಡುವುದು. ಸರಾಸರಿ ಒಂದು ಎಕರೆಗೆ 150 ಟ್ರ್ಯಾಕ್ಟರ್ ಲೋಡ್ ಮರಳಿಗೆ 15,000 ರೂಪಾಯಿ ವೆಚ್ಚ ತಗಲುವುದು. ಸುಮಾರು 200 ರಿಂದ 300 ಜನ ರೈತರು ಈ ಪದ್ಧತಿ ಅನುಸರಿಸುತ್ತಿದ್ದಾರೆ. ಇದರಿಂದಾಗಿ ಆ ಭಾಗದ ಬಹುಪಾಲು ರೈತರ ಆರ್ಥಿಕ ಮಟ್ಟ ಸುಧಾರಿಸಿದೆಯಂತೆ. ಜಾನುವಾರುಗಳಿಗೆ ಬರಗಾಲದಲ್ಲಿ ಮೇವು ಲಭ್ಯವಾಗಿದೆ ಎನ್ನುತ್ತಾರೆ. ರಸಗೊಬ್ಬರದ ಬಳಕೆ ಇಲ್ಲದಿರುವುದರಿಂದ ಇದೊಂದು ಪರಿಸರ ಸ್ನೇಹಿ ಪ್ರಯೋಗ ಎನ್ನಬಹುದು.

ಸಾಂಬಾರ ಅಡಿಕೆ ಮತ್ತು ಖರ್ಜೂರ ತಾಂಬೂಲ

ಪಾನ್ ಪರಾಗ್, ಗುಟ್ಕದಂತಹ ಮೌಲ್ಯವರ್ಧಿತ ಅಡಿಕೆ ಉತ್ಪನ್ನಗಳಿಂದ ಆರೋಗ್ಯಕ್ಕೆ ಹಾನಿ ಎಂಬ ವಿಚಾರ ಈಗ ದಟ್ಟವಾಗಿ ಕೇಳಿ ಬರುತ್ತಿದೆ. ಇದಕ್ಕೆ ಪರಿಹಾರವಾಗಿ ಆರೋಗ್ಯ ಮತ್ತು ರುಚಿಕರವಾದ ಸಾಂಬಾರ ಅಡಿಕೆ ಒಂದನ್ನು ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ ತಾಲ್ಲೂಕಿನ ಅನಿಲ ಕಿಶೋರರು ಕಂಡು ಹಿಡಿದಿರುವರು. ಇವರು ಅಡಿಕೆಯನ್ನು ಅವಲಕ್ಕಿಯಂತೆ ತುರಿದುಕೊಳ್ಳುತ್ತಾರೆ. ನಂತರ ತುಪ್ಪದಲ್ಲಿ ಹುರಿದು ವಿಧವಿಧ ಸಾಂಬಾರಗಳಿಂದ ತಯಾರಿಸಿಕೊಂಡ ಪಾಕದಲ್ಲಿ ಅದ್ದಿ ಘಮಘಮ ಪರಿಮಳ ಬೀರುವ ಅಡಿಕೆ ತಯಾರಿಸಿಕೊಳ್ಳುತ್ತಾರೆ. ಒಣ ವೆನಿಲ್ಲಾವನ್ನು ಸೇರಿಸಿದ ಅಡಿಕೆಯಂತೂ ಬಾಯೊಳಗಿಟ್ಟರೆ ಸಾಕು ಕರಗಿ ನೀರಾಗುತ್ತದೆನ್ನುವರು ಅಶೋಕ್. ಆರೋಗ್ಯವನ್ನು ಕಾಪಾಡುವ ಈ ಅಡಿಕೆ ಪುಡಿಯಲ್ಲಿ ಉಗುಳಬೇಕಾದದ್ದು ಏನೂ ಇಲ್ಲ, ಎಲ್ಲವೂ ನುಂಗಬಹುದಾದ ಕಚ್ಚಾವಸ್ತುಗಳು ಇವು. ಅಡಿಕೆ ಮೆಲ್ಲುವ ಹವ್ಯಾಸ ಇಟ್ಟುಕೊಂಡವರು ಮನೆಯಲ್ಲೇ ತಯಾರಿಸಿಕೊಳ್ಳಬಹುದೆನ್ನುವರು ಅಶೋಕ್.

ಇದೇ ರೀತಿ ಬಂಟ್ವಾಳದ ಕಡಪಡುವಿನರವರು ಸುಗಂಧಭರಿತ ಖರ್ಜೂರ ತಾಂಬೂಲ ಒಂದನ್ನು ವಿಶೇಷ ರೀತಿಯಲ್ಲಿ ತಯಾರಿಸುವರು.



ಅಡಿಕೆ ಪುಡಿ ಜೊತೆಗೆ ಮೆಣಸು, ಏಲಕ್ಕಿ, ಲವಂಗ, ಶುಂಠಿ, ಇತ್ಯಾದಿ ಹಲವು ನೈಸರ್ಗಿಕ ಸುಗಂಧ ಮತ್ತು ಔಷಧಿ ಉತ್ಪನ್ನಗಳನ್ನು ಹದವಾಗಿ ಮಿಶ್ರ ಮಾಡಿ ಒಂದು ತಾಜಾ ಖರ್ಜೂರದೊಳಗೆ ಸೇರಿಸಿ ಮುಚ್ಚಲಾಗುತ್ತದೆ. ಅದನ್ನು ಹಾಳಾಗದಂತಿಡಲು ಒಂದು ಜರಿ ಪೇಪರ್‌ನಲ್ಲಿ ಮುಚ್ಚಿ ಚಾಕಲೇಟ್‌ನಂತೆ ಬಳಸಲು ಅನುವು ಮಾಡಿಕೊಡಲಾಗಿದೆ. ಈ ವಿಶೇಷ ತಾಂಬೂಲವನ್ನು ಪ್ರಿಯಾ ಗೃಹ ಉದ್ಯಮದಡಿಯಲ್ಲಿ ತಯಾರಿಸಿ ಮಾರಾಟ ಮಾಡಲು ವ್ಯವಸ್ಥೆಗೊಳಿಸಲಾಗಿದೆ.

ಮೂಲ : ಅಡಿಕೆ ಪತ್ರಿಕೆ, ಜುಲೈ 2005

****

Subscription Rates for *Honey Bee*

Category	South Asia* (Indian Rs.)	International (US $ Daller)
Annual		
Individual	150	30
Supporter	500	50
Institution / Library	2,500	200
Life (15 Years)		
Individual	2,500	500
Institution / Library	10,000	1,000
Other Publications		
Spirit of Sustaninability	50	10
Nature Heals	150	20
Profiles of Innovators	175	25
Back issues of *Honey Bee*	**(1990-2003)**	
Hard Copies (Postage Extra)	1, 500 Individual	50
	5,000 Institution	200
CD	250 Individual	20
	1,000 Institution	60

** Includes : India, Nepal, Bhutan, Bangladesh, Pakistan, Sri Lanka and the Maldives.*

Please send your contributions through bank draft/ cheque in favour of **A/c Sristi Innovations** at the edutorial address; C/o Prof Anil K Gupta, Editor, *Honey Bee*, Indian Institute of Management, Vastrapur, Ahmedabad- 380 015 India. Phone : 91-79-26324927, Email : honeybe@sristi.org; Website : www.sristi.org

ಡಾ. ಪಿ. ಜಿ. ಚೆಂಗಪ್ಪ

ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ ನೂತನ ಉಪಕುಲಪತಿಗಳು

ಕೃಷಿ ಮಾರುಕಟ್ಟೆ, ಕೃಷಿ ಅರ್ಥಶಾಸ್ತ್ರ ವಾಣಿಜ್ಯ, ಜೈವಿಕ ಸಂಪನ್ಮೂಲ, ಆಹಾರ ನೀತಿ ವಿಚಾರಗಳ ಬಗ್ಗೆ ವಿಶೇಷ ಪಾಂಡಿತ್ಯ ಮತ್ತು ಪರಿಣತಿ ಹೊಂದಿರುವ ಕೊಡಗಿನ ಮೂಲದ ಡಾ. ಚೆಂಗಪ್ಪ ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ ನೂತನ ಉಪಕುಲಪತಿಗಳಾಗಿ ಆಯ್ಕೆಯಾಗಿರುವರು. ಅಂತರಾಷ್ಟ್ರೀಯ ಜೈವಿಕ ಸಂಪನ್ಮೂಲ ಸಂವರ್ಧನಾ ಸಂಸ್ಥೆ *(International Plant Genetic Resource Institute)* ಮತ್ತು ಅಂತರರಾಷ್ಟ್ರೀಯ ಆಹಾರ ನೀತಿ ಸಂಶೋಧನಾ ಸಂಸ್ಥೆ *(International Food Policy Research Institute)* ಗಳಂತಹ ಮಹತ್ವದ ಸಂಸ್ಥೆಗಳಲ್ಲಿ ಕೆಲಸ ಮಾಡಿದ ಅನುಭವ ಡಾ. ಚೆಂಗಪ್ಪನವರಿಗಿರುತ್ತದೆ.

ಡಾ. ಚೆಂಗಪ್ಪನವರ ನೇತೃತ್ವದಲ್ಲಿ ಕೃಷಿ ವಿಶ್ವವಿದ್ಯಾನಿಲಯ ಮತ್ತಷ್ಟು ರೈತಪರವಾಗಿ, ಪರಿಸರ, ಸಾವಯವ ಕೃಷಿ, ಜೀವ ವೈವಿಧ್ಯ, ದೇಶೀಯ ತಂತ್ರ ಜ್ಞಾನ ಮತ್ತು ತಳಮಟ್ಟದ ಅನುಶೋಧನೆಗಳತ್ತ ಹೆಚ್ಚು ಗಮನ ಹರಿಸುವಂತಾಗಲೆಂದು ಹಿತ್ತಲಗಿಡ ಹಾರೈಸುತ್ತದೆ.

ರಾಷ್ಟ್ರೀಯ ಪ್ರಶಸ್ತಿ ವಿಜೇತ ಕನ್ನಡಿಗರು

ದಿನಾಂಕ 11-2-2007 ರಂದು ನವದೆಹಲಿಯ ಭಾರತೀಯ ಕೃಷಿ ಸಂಶೋಧನಾ ಸಂಸ್ಥೆಯಲ್ಲಿ ಜರುಗಿದ ರಾಷ್ಟ್ರೀಯ ಅನುಶೋಧನಾ ಪ್ರತಿಷ್ಠಾನದ ನಾಲ್ಕನೇ ಸುತ್ತಿನ ಸ್ಪರ್ಧೆಯಲ್ಲಿ ಕರ್ನಾಟಕದ ಅಣ್ಣಾ ಸಾಹೇಬ ಉದ್ಗಾವೆ, ಬೆಳಗಾಂ, ಇವರ ಕಬ್ಬು ನೆತ್ತಿ ಕಟಾವು ಮಾಡುವ ಯಂತ್ರಕ್ಕೆ ಮತ್ತು ದಿ॥ಅಣ್ಣೇಗೌಡರು, ಬೇಲೂರು ತಾಲೂಕು ಮಲ್ಲಿಕಾರ್ಜುನಪುರ, ಇವರ ರೋಗ ಮುಕ್ತ ಚಂದ್ರಿಕೆಯ ತಯಾರಿಕೆಗೆ ರಾಷ್ಟ್ರಪತಿ ಡಾ. ಎ.ಪಿ.ಜೆ. ಅಬ್ದುಲ್ ಕಲಾಂ ಅವರಿಂದ ಸಮಧಾನಕರ ಬಹುಮಾನ ದೊರೆತಿರುತ್ತದೆ. ಇವರ ಸಾಧನೆಗೆ ಹಿತ್ತಲಗಿಡ ಬಳಗ ಅಭಿನಂದಿಸುತ್ತದೆ.

ಹೊಟ್ಟೆ ನೋವಿಗೆ ಅಡಿಗೆ ಉಪ್ಪಿನ ಉಪಚಾರ

ಸರತ್ ಪ್ರಧಾನ್ ಒರಿಸ್ಸಾದ ಅಂಗುಲ್ ಜಿಲ್ಲೆಯ ಪೈಕಸಾಹಿ ಗ್ರಾಮದವರು. ಇವರು ಒಂದು ಲೀಟರ್ ನೀರಿನಲ್ಲಿ ಐದು ಗ್ರಾಂ. ನಷ್ಟು ಅಡಿಗೆ



ಉಪ್ಪನ್ನು ಕರಗಿಸಿ, ಅದನ್ನು ತಾಜಾ ಪಪ್ಪಾಯಿ ಗಿಡದ ಎಲೆಯ ತೊಟ್ಟಿನ ಟೊಳ್ಳಿನ ಮೂಲಕ ಹೀರಿ ಕುಡಿದರೆ, ಹೊಟ್ಟೆ ನೋವು ಗುಣ ವಾಗುವುದು ಎನ್ನುತ್ತಾರೆ. ಪಪ್ಪಾಯದಲ್ಲಿ ಸಸಾರಜನಕ ವಿಭಜನೆಯಾಗಿಸುವ ಅಂಶ ಇರುವುದರಿಂದ ಈ ಪದ್ಧತಿ ಉತ್ತಮವೆನ್ನುತ್ತಾರೆ.

ಅಸ್ತಮಾಕ್ಕೆ ಕರಿಮೆಣಸಿನ ಕಷಾಯ

ಕಂಚನ್ ರವಿಕುಮಾರ್ ಭುವನೇಶ್ವರದ ನಯಪಲ್ಲಿಯವರು. ಇವರು ಅಸ್ತಮಾ ನಿಯಂತ್ರಣಕ್ಕೆ, ಒಂದು ಸರಳ ಉಪಾಯ ಕಂಡು ಹಿಡಿದಿರುವರು. ಐದು ಗ್ರಾಂ.ನಷ್ಟು ಗರಿಕೆ ಹುಲ್ಲಿನ ಭೂಮಿಯ ಮೇಲಿನ ಭಾಗವನ್ನು 20 ಗ್ರಾಂ.ತುಳಸಿ ಎಲೆಯೊಂದಿಗೆ ಅರೆಯಬೇಕು. ಈ ಮಿಶ್ರಣವನ್ನು ಒಂದು ಚಹಾ ಚಮಚದಷ್ಟು ಜೀರಿಗೆ ಮತ್ತು ಕರಿಮೆಣಸಿನೊಂದಿಗೆ 60 ರಿಂದ 100 ಮಿ.ಲೀ. ನೀರಿನಲ್ಲಿ ಕುದಿಸಬೇಕು. ಇವರ ಪ್ರಕಾರ ಖಾಲಿ ಹೊಟ್ಟೆಗೆ ಈ ಕಷಾಯವನ್ನು ಮೂರು ದಿನಗಳ ಕಾಲ ಸೇವಿಸಿದರೆ ಅಸ್ತಮಾದಲ್ಲಿ ಇಳಿಮುಖವನ್ನು ಕಾಣಬಹುದಂತೆ.

ಮೂಲ: ಹನಿಬೀ, VOL 17(1-2), ಜೂನ್ 2006, ಪುಟ 40.

ಜಂತು ಹುಳು

ದೇವನಹಳ್ಳಿ, ಬೆಂಗಳೂರು ಗ್ರಾಮಂತರ ಜಿಲ್ಲೆಯ ಶಿವನಾಪುರದ ರಮೇಶ್, ಚಕ್ಕೋತ ಹಣ್ಣಿನಿಂದ ಮಾನವರ ಜಂತುಹುಳ ನಿವಾರಣೆ ಕಂಡುಕೊಂಡಿದ್ದಾರೆ. ಬೆಳಿಗ್ಗೆ ಎದ್ದು ಖಾಲಿ ಹೊಟ್ಟೆಗೆ ಎರಡು ಚಕ್ಕೋತ ತೊಳೆ ತಿಂದು ಐದು ನಿಮಿಷದ ನಂತರ ಒಂದು ತುಂಡು ಅರ್ಧ ಹಣ್ಣಾದ ಪಪ್ಪಾಯಿ ಹಣ್ಣು ತಿನ್ನಬೇಕು. ಇದನ್ನು ತಿಂದ ಒಂದು ಗಂಟೆಯ ಕಾಲ ಬೇರೆ ಏನನ್ನು ಉಪಯೋಗಿಸಬಾರದೆನ್ನುವರು. ಆಗ ಮಾನವರ ಹೊಟ್ಟೆಯ ಜಂತು ನಿವಾರಣೆಯಾಗುತ್ತದೆ ಎನ್ನುವರು.

ಮಧುಮೇಹಕ್ಕೆ ಸೀಗೆಕಾಯಿಪುಡಿ ಔಷಧಿ

ಸೀಗೆಪುಡಿಯನ್ನು ಸ್ನಾನಕ್ಕೆ , ಪಾತ್ರೆ ಶುಚಿಗೆ ನಂಜು ಆದಾಗ ಪಟ್ಟಿ ಕಟ್ಟಲು, ಒಟ್ಟಾರೆ ದೇಹದ ಹೊರಭಾಗದ ಶುದ್ಧಿಗೆ ಬಳಸುವುದು ಎಲ್ಲರಿಗೂ ಗೊತ್ತಿರುವ ವಿಷಯ. ಆದರೆ ಇದು ದೇಹದ ಒಳಗೆ ಸೇರಿರುವ ರೋಗಾಣುವನ್ನು ನಾಶ ಪಡಿಸಬಹುದೇ ಎಂಬ ವಿಷಯ ಮನಸ್ಸಿಗೆ ಬಂದಿದ್ದೇ ತಡ, ಕಾರ್ಯಗತ ರಾಗಿಯೇ ಬಿಟ್ಟವರು ಸಾಗರ ತಾಲ್ಲೂಕಿನ ಮಾವಿನ ಸರದ ಎಂ.ಜಿ. ಸತ್ಯ ನಾರಾಯಣರಾವ್‌ರವರು. ಇವರು ಸ್ವತಃ ಮಧುಮೇಹದಿಂದ ಬಳಲುತ್ತಿರುವವರು. ಎರಡು ತಿಂಗಳ ಕಾಲ ಪ್ರತಿದಿನ ಸಂಜೆ ಒಂದು ಸ್ಟೀಲ್ ಲೋಟಕ್ಕೆ ಒಂದು ಚಮಚ ಸೀಗೆಪುಡಿ, ನಾಲ್ಕು ಚಮಚ ನೀರು ಹಾಕಿ ಕದಡಿ ಇಟ್ಟು ಬೆಳಿಗ್ಗೆ ಎದ್ದ ತಕ್ಷಣ, ಇದನ್ನು ಸೋಸಿದ ನೀರನ್ನು ಹಸಿದ ಹೊಟ್ಟೆಗೆ ಕುಡಿಯುತ್ತಿದ್ದರು. ಮಧುಮೇಹಕ್ಕೆ ಬೇರಾವ ಔಷಧಿಯನ್ನು ಬಳಸುತ್ತಿರಲಿಲ್ಲ. ಎರಡು ತಿಂಗಳ ನಂತರ ಇವರು ಮಧುಮೇಹ ಪರೀಕ್ಷೆ ಮಾಡಿಸಿದಾಗ ಕಾಯಿಲೆ ಸಾಮಾನ್ಯವಾಗಿದ್ದು ಮಹತ್ತರ ಬದಲಾವಣೆಯನ್ನು ಕಂಡು ಕೊಂಡಿದ್ದಾರೆ.

ವಿಳಾಸ: ಲಲಿತಾ ಜಿ.ಭಟ್, ಜಿಗಳೆ ಮನೆ, ಸಾಗರ ತಾಲ್ಲೂಕು, ಯಡಜಿಗಳೆ ಅಂಚೆ, ಶಿವಮೊಗ್ಗ-577401

ಕೃಷ್ಣಯ್ಯನವರ ನಾಟಿ ವೈದ್ಯ ಪದ್ಧತಿಗಳು

ಮಾನವರು ಕೃಷಿ ಕೆಲಸ ಮಾಡುವಾಗ ಶರೀರದ ಮೇಲೆ ಆಗುವ ಕೆಲವು ತೊಂದರೆಗಳಿಗೆ ಕೊಪ್ಪ ತಾಲ್ಲೂಕಿನ ಹಿರೇಹಡ್ಲು ಗ್ರಾಮದ ಶ್ರೀ ಕೃಷ್ಣಯ್ಯನವರು ಗಿಡ ಮೂಲಿಕೆಯ ಔಷಧಿ ಕಂಡು ಕೊಂಡಿದ್ದಾರೆ.

★**ನಾಗದಾಳಿ ಬೇರು:** ತೋಟ ಗದ್ದೆಗಳಲ್ಲಿ ಕೆಲಸ ಮಾಡುವಾಗ ಮುಟ್ಟಿದರೆ ಮುನಿ ತರಚಿ ನಂಜಿನ ರೋಗ, ಬಾಧೆ, ಊತ ಮಾಡುತ್ತದೆಯಂತೆ. ಇದನ್ನು ನಿವಾರಿಸಲು ಇವರ ಪರಿಹಾರ ಹೀಗಿದೆ. ನಾಗದಾಳಿ ಬೇರನ್ನು (*Ruta graveolens,L.*)ತೇಯ್ದು ಕೊಬ್ಬರಿ ಎಣ್ಣೆಯಲ್ಲಿ ಬಿಸಿಮಾಡಿ ಗಾಯಕ್ಕೆ ಹಚ್ಚುತ್ತಾ ಬಂದರೆ ಮೂರು ಅಥವಾ ನಾಲ್ಕು ದಿನಗಳಲ್ಲಿ ನಿವಾರಿಸಿಕೊಳ್ಳಬಹುದೆನ್ನುತ್ತಾರೆ.

★**ಶತಾವರಿ ಸೊಪ್ಪು:** ಜಮೀನಿನಲ್ಲಿ ಸತ್ತ ಹಾವುಗಳ ಹಲ್ಲು, ಮೂಳೆ ಬಿದ್ದಿರುತ್ತವೆ. ಇವು ಕೈಕಾಲುಗಳಿಗೆ ಚುಚ್ಚಿದಾಗ ನಂಜಿನ ಕಾರಣ ಇಡೀ ಕೈಕಾಲು ಬಾತುಕೊಂಡು ನೋವು ಅನುಭವಿಸಬೇಕಾಗುತ್ತದೆ. ಇದಕ್ಕೆ ಪರಿಹಾರವಾಗಿ ಶತಾವರಿ ಸೊಪ್ಪು (*Asparagus racemosus Willd*) ದೇಶೀಯ ಆಕಳ ಹಾಲು ಸೇರಿಸಿ ಅರೆದುಕೊಳ್ಳುವುದು. ಇದನ್ನು ಊತದ ಮೇಲಿನಿಂದ ಕೆಳಭಾಗಕ್ಕೆ ಹಚ್ಚುತ್ತಾ ಬಂದರೆ ಒಂದೆರಡು ದಿನಗಳಲ್ಲಿ ಗುಣಮುಖವಾಗುವುದೆನ್ನುತ್ತಾರೆ.

★**ಬೆಳ್ಳಟ್ಟೆ :** ಮಲೆನಾಡಿನ ಕಾಡಿನಲ್ಲಿ ಹೊಳೆಗಾರ ಎಂಬ ಮರ ಇರುತ್ತದೆ.



ಇದು ವ್ಯವಸಾಯಕ್ಕೆ ಅನಾನುಕೂಲವಾಗಿರುತ್ತದೆ. ಇದನ್ನು ಕಡಿಯಲು ಹೋದಲ್ಲಿ ಮೈ ಕೈಗಳಿಗೆ ಇದರ ಹಾಲು ಹಾರಿ ಆ ಜಾಗದಲ್ಲಿ ಬೊಕ್ಕೆ ಎದ್ದು ಕೀವಾಗಿ ಗಾಯ ಗುಣವಾಗುವುದೇ ಇಲ್ಲ. ಇಂಥ ಸಂದರ್ಭದಲ್ಲಿ ಬೆಳ್ಳಟ್ಟೆ (*Albizzia procera, Benth*)ಗಿಡದ ದಂಟನ್ನು ಬೆಂಕಿಯಲ್ಲಿ ಹಾಕಿ ಬಾಡಿದ ಕೂಡಲೆ ತೆಗೆದು ಅರೆದು ತೆಂಗಿನ ಎಣ್ಣೆಯಲ್ಲಿ ಮಿಶ್ರಮಾಡುವುದು. ಪ್ರತಿ ದಿನ ಗಾಯದ ಮೇಲೆ ಹಚ್ಚಿದರೆ ಗಾಯದ ಕಲೆ ಸಹಿತ ಹದಿನೈದು ದಿನಗಳಲ್ಲಿ ಗುಣವಾಗುತ್ತದೆ ಎನ್ನುವರು.

★ **ಚಂದಣಕದ ಸೊಪ್ಪು:** ಹುಳುಕು ಹಲ್ಲು ಬಂದರೆ ಹಲ್ಲು ನೋವು. ಇದನ್ನು ತಡೆಗಟ್ಟಲು ಕೃಷ್ಣಯ್ಯನವರೊಂದು ಪರಿಹಾರ ಕಂಡು ಕೊಂಡಿದ್ದಾರೆ. ಚಂದಣಕದ ಸೊಪ್ಪನ್ನು ಲವಂಗದ ಜೊತೆಗೆ ಅರೆದು ಹುಳುಕು ಹಲ್ಲಿನ ಜಾಗದಲ್ಲಿ ಇಟ್ಟರೆ ನೋವು ಗುಣವಾಗುತ್ತದೆ ಎನ್ನುವರು.

★**ಮರಬಾಳೆ:** ಹಾಗೆಯೇ ಕಿವಿ ನೋವಿಗೂ ಔಷಧಿ ಕಂಡುಕೊಂಡಿದ್ದಾರೆ. ಮರಬಾಳೆಯ ತುಂಡಿಗೆ ಕೊಬ್ಬರಿ ಎಣ್ಣೆ ಸವರಿ ಒಲೆಯ ಬಿಸಿ ಬೂದಿಯಲ್ಲಿ ಬಾಡಿಸಿ ಹಿಂಡಿದರೆ ರಸ ಬರುತ್ತದೆ. ಈ ರಸವನ್ನು ನೋವಿನ ಕಿವಿಗೆ ಬಿಟ್ಟರೆ ಒಂದೆರಡು ದಿನಗಳಲ್ಲಿ ನೋವು ಮತ್ತು ಊತ ಗುಣವಾಗುತ್ತದೆ ಎನ್ನುವರು.

★ಮಲೆನಾಡಿನಲ್ಲಿ ಹಂಗಾರಕ ಮುಳ್ಳು ಮರವನ್ನು ಬೇಲಿಗೆ ಬಳಸುತ್ತಾರೆ. ಆಕಸ್ಮಿಕ ಇದರ ಮುಳ್ಳು ಮೈ ಕೈಗೆ ಪರಚಿದರೆ ಆ ಭಾಗ ಊತವಾಗುತ್ತದೆ. ಯಾವ ಕೆಲಸ ಮಾಡಲೂ ಆಗುವುದಿಲ್ಲ. ಇದಕ್ಕೆ ಮದ್ದು ಇದೇ ಮರದ ತೊಗಟೆಯನ್ನು ನಿಂಬೆರಸದಲ್ಲಿ ತೇಯ್ದು ಬಿಸಿ ಮಾಡಿ ಹಚ್ಚುತ್ತಿದ್ದರೆ ಎರಡು ದಿನಗಳಲ್ಲಿ ಗುಣವಾಗುತ್ತದೆ ಎನ್ನುವರು.

ಶೃಂಗೇಶ್ವರರ ನಾಟಿ ವೈದ್ಯ ಪದ್ಧತಿ

ಕೊಪ್ಪ ತಾಲೂಕು ಬೋರನಕಟ್ಟೆಯ ಶ್ರೀ ಬಿ.ಆರ್. ಶೃಂಗೇಶ್ವರರು ಸುಮಾರು 35 ವರ್ಷಗಳಿಂದ ಮೂಲವ್ಯಾಧಿ, ಆಮಶಂಕೆ, ರಕ್ತಸ್ರಾವವಾಗುವಿಕೆಗೆ ಗಿಡಮೂಲಿಕೆಯ ಔಷಧಿ ಕೊಡುತ್ತಿದ್ದಾರೆ. ಸ್ಥಳೀಯವಾಗಿರುವ ಕವತಿ ಮರದ ತೊಗಟೆಯನ್ನು ಜಜ್ಜಿ-ರಸತೆಗೆದು ಒಂದು ಒಳಲೆಯಷ್ಟು ರಸವನ್ನು ಹಾಲಿನೊಂದಿಗೆ ಸೇರಿಸಿ ಒಂದು ಬಾರಿ ಕುಡಿದರೆ ಸಾಕು, ಈ ಕಾಯಿಲೆಗಳು ಉಪಶಮನವಾಗುತ್ತದೆ ಎನ್ನುವರು. ನೂರಾರು ಜನರಿಗೆ ಔಷಧಿ ಕೊಟ್ಟು ಗುಣ ಪಡಿಸಿರುವುದಾಗಿ ಶೃಂಗೇಶ್ವರರು ಹೇಳುತ್ತಾರೆ.

'ಎರಾ ಆರ್ಗಾನಿಕ್'

ಸಾವಯವ ಕೃಷಿ ಚಳುವಳಿಗೆ ಉತ್ತೇಜನ ನೀಡುವ ಗುರಿ ಹೊಂದಿದ ಬೆಂಗಳೂರಿನ 'ಎರಾಆರ್ಗಾನಿಕ್ ಸಂಸ್ಥೆ', ಅಂತರರಾಷ್ಟ್ರೀಯ ಸಾವಯವ ಸಂಸ್ಥೆ ಒಂದರಿಂದ ಪ್ರಮಾಣಿತ ಹೊಂದಿರುತ್ತದೆ. ಇದು ಬೆಂಗಳೂರಿನ ಡಾಲರ್ಸ ಕಾಲೋನಿಯಲ್ಲಿ ಈಗಾಗಲೇ ಕಾರ್ಯ ನಿರ್ವಹಿಸಲು ಆರಂಭಿಸಿದೆ. ಇದರ ರೂವಾರಿ ಸಾವಯವ ಕೃಷಿಕರಾದ ಶ್ರೀ ಹೆಚ್. ಆರ್. ಜಯರಾಂರವರು, ಇದು ನಮ್ಮ ದೇಶದಲ್ಲೇ ಮೊದಲ ಪ್ರಯತ್ನ ಎನ್ನುತ್ತಾರೆ. ಜೈವಿಕ ಕೃಷಿ ಸೊಸೈಟಿಯ ಕಾರ್ಯದರ್ಶಿಗಳಾಗಿರುವ ಇವರು ಇದರ ಸ್ಥಾಪಕರು ಕೂಡ. ಸಾವಯವ ಉತ್ಪನ್ನಗಳ ಮಾರುಕಟ್ಟೆಯಲ್ಲಿ ಮಧ್ಯವರ್ತಿಗಳ ತೊಂದರೆ ಯನ್ನು ತಪ್ಪಿಸಲು ಕೈಗೊಂಡ ಪ್ರಯತ್ನವೇ ಎರಾ ಆರ್ಗಾನಿಕ್. ಇದು ಕೇವಲ ಆಹಾರ ಮಳಿಗೆಯಾಗಿರದೇ, ರೈತರನ್ನು ಹೆಚ್ಚು ಹೆಚ್ಚು ಸಾವಯವ ಕೃಷಿಗೆ ಬರುವಂತೆ ಮಾಡುವ ಉದ್ದೇಶವನ್ನು ಕೂಡ ಹೊಂದಿದೆ. ಸಣ್ಣ ರೈತರಿಗೆ ಕಡಿಮೆ ದರದಲ್ಲಿ ಸಾವಯವ ಕೃಷಿ ಪ್ರಮಾಣ ಪತ್ರವನ್ನು ಒದಗಿಸಿ ಕೊಡುವ ಯೋಜನೆಯನ್ನೂ ಈ ಸಂಸ್ಥೆ ಇಟ್ಟು ಕೊಂಡಿದೆ.

'ಎರಾ ಆರ್ಗಾನಿಕ್' ಬೆಳಗಾಂನ ಪ್ರಗತಿಪರ ಸಾವಯವ ಕೃಷಿಕರಿಂದ ಉತ್ತಮ ಗುಣ ಮಟ್ಟದ ಬೆಲ್ಲ, ಬೆಲ್ಲದ ಹುಡಿ; ಹಾಗೇ ತಾಜಾ ಸಾವಯವ ತರಕಾರಿಗಳನ್ನು ಬೆಂಗಳೂರು ಗ್ರಾಮಾಂತರದಿಂದ ತರಿಸಿ ಮಾರಾಟ ಮಾಡುತ್ತಿದೆ. ಸಾಬೂನು ಉತ್ಪನ್ನಗಳನ್ನು ಪಾಂಡಿಚೇರಿಯಲ್ಲಿ ಎರಾ ಆರ್ಗಾನಿಕ್ ಹೆಸರಿನಲ್ಲಿ ಉತ್ಪಾದಿಸಿ, ಇಲ್ಲಿ ಮಾರಾಟಕ್ಕೆ ಇಡಲಾಗಿದೆ. ಕೇರಳದ ವಯನಾಡು, ಕಲ್ಪೆಟ್ಟದಿಂದ ಬಿದಿರು ಹಾಗೂ ಬಿದಿರಿನ ಉತ್ಪನ್ನಗಳು ಕೂಡ ಇಲ್ಲಿ ಲಭ್ಯ. ಆಂಧ್ರ ಮೂಲದ ಸಾವಯವ ಹತ್ತಿ ಬಟ್ಟೆಯಿಂದ ತಯಾರಿಸಲಪ್ಪಟ್ಟ ಉತ್ಕೃಷ್ಟ ಬಟ್ಟೆಗಳೂ ಇಲ್ಲಿ ಸಿಗುತ್ತವೆ. ಇವೇ ಅಲ್ಲದೇ ಅಗರಬತ್ತಿ, ಕೃಷಿ ಸಾಹಿತ್ಯ ಪುಸ್ತಕಗಳು, ನೈಸರ್ಗಿಕ ಮೇಣದ ಬತ್ತಿ, ಸ್ವಾಭಾವಿಕ ಬಣ್ಣದ ಬಟ್ಟೆಗಳು, ದೃಢೀಕೃತ ತುಪ್ಪ ಆಯುರ್ವೇದ ಔಷಧಿಯಲ್ಲಿ ಚವನಪ್ರಾಶ ಇವೇ ಮುಂತಾದ ಉತ್ಪನ್ನಗಳು ಇಲ್ಲಿ ಲಭ್ಯವಿದೆ. ಇಲ್ಲಿ ಸಿಗುವ ಎಲ್ಲಾ ಉತ್ಪನ್ನಗಳು ಸಾವಯವ ಎಂದು ದೃಢೀಕರಿಸಲ್ಪಟ್ಟವಾಗಿರುವುವಲ್ಲದೇ ಪ್ರಮಾಣೀಕರಣಕ್ಕೆ ಸಂಬಂಧಿಸಿದ ಎಲ್ಲಾ ಅಂಶಗಳನ್ನೂ ಪರಿಗಣನೆಗೆ ತೆಗೆದುಕೊಂಡೇ ಇಲ್ಲಿ ಮಾರಾಟಕ್ಕೆ ಇಡಲಾಗುತ್ತಿದೆ ಎನ್ನುತ್ತಾರೆ ಜಯರಾಂರವರು. ಮುಂದಿನ ದಿನಗಳಲ್ಲಿ ರೈತರಿಗೆ ಕೃಷಿ ತಂತ್ರಜ್ಞರಿಂದ, ಪ್ರಗತಿಪರ ರೈತರನ್ನೊಳಗೊಂಡ ಪರಿಸರ ಸ್ನೇಹಿ ಸಾವಯವ ಕೃಷಿಯ ಕುರಿತು ಸಭೆ ನಡೆಸುವ ಯೋಚನೆಯಲ್ಲಿದ್ದೆ ಎರಾ ಆರ್ಗಾನಿಕ್.

ವಿಳಾಸ : 348, ಆರ್.ಎಂ.ವಿ, ಕ್ಲಬ್ ಬಳಿ
ಆರ್.ಎಂ.ವಿ. 2ನೇಹಂತ, ಡಬಲ್ ರೋಡ್, ಡಾಲರ್ಸ ಕಾಲೋನಿ,
ಬೆಂಗಳೂರು -94, ಫೋನ್ : 9844034777.
ಇ-ಮೇಲ್ : info@ eraorganic.in

Eco
Buy or Sell

ಸಾವಯವ ಕೃಷಿ ಉತ್ಪನ್ನಗಳಿಗೆ ಸೂಕ್ತ ಮಾರುಕಟ್ಟೆ ದೊರಕಿಸುವ ಸಲುವಾಗಿ ಗದಗದಲ್ಲಿ "Eco Buy or Sell" ಸಂಸ್ಥೆ ಹುಟ್ಟುಹಾಕ ಲಾಗಿದೆ.ಇದು ಬೆಳೆಗಾರರ ಮತ್ತು ಗ್ರಾಹಕರ ನಡುವೆ ಸಂಪರ್ಕ ಸೇತುವೆಯಂತೆ ಇದ್ದು ಕಾರ್ಯನಿರ್ವಹಿಸುತ್ತಿದೆ. ಯೋಗ್ಯ ಮಾರುಕಟ್ಟೆ ದೃಷ್ಟಿಯಿಂದ ನಿಗದಿತ ಗುಣಮಟ್ಟದ ಉತ್ಪನ್ನಗಳನ್ನು ರೈತರು ಬೆಳೆಯುವುದೂ ಕೂಡ ಮುಖ್ಯ. ಜಾಗತಿಕ ಮಟ್ಟದಲ್ಲಿ ಇಂದು ಸಾವಯವ ಪದಾರ್ಥ ಖರೀದಿದಾರರು ಪ್ರಮಾಣಿಕೃತ ಉತ್ಪನ್ನಗಳನ್ನು (Certified Farm Produce) ಬಯಸುವುದರಿಂದ ರೈತರು ಇಂತಹ ಪ್ರಮಾಣ ಪತ್ರ ಹೊಂದಿರಲೇಬೇಕಾಗುತ್ತದೆ. ಈ ಸಂಸ್ಥೆ ಒಪ್ಪಂದ ದೃಢೀಕರಣ ವ್ಯವಸ್ಥೆಯನ್ನು ಒಳ ಗೊಂಡಿದೆ ಹಾಗೂ Eco buy or sell ಲೇಬಲ್‌ನಲ್ಲಿ ಮಾರಾಟ ಮಾಡುತ್ತದೆ. ಆಸಕ್ತರು : ಡಿ.ಆರ್. ಪಾಟೀಲ್, ಶಾಸಕರು, ಹುಲಿಕೋಟಿ , ಗದಗ ದೂರವಾಣಿ : 9448007354 ಮೂಲಕ ಸಂಪರ್ಕಿಸಬಹುದು.

ಮಿಡಿ ಮಾವು ಉತ್ಸವ

ಪಶ್ಚಿಮ ಘಟ್ಟದ ನದಿ ಕಣಿವೆಗಳ ಪ್ರದೇಶದಲ್ಲಿ ಹೇರಳವಾಗಿ ಕಾಣಬರುವ ಮಾವಿನ ಮಿಡಿಗಳಿಗೆ ತನ್ನದೇ ಆದ ವಿಶಿಷ್ಟ ಸ್ಥಾನವಿದೆ. ಅಪ್ಪೆ ಜೀರಿಗೆ ಎಂದು ಕರೆಯಲ್ಪಡುವ ಈ ಮಿಡಿಗಳನ್ನು ಹೆಚ್ಚಾಗಿ ಉಪ್ಪಿನಕಾಯಿ ತಯಾರಿಕೆಯಲ್ಲಿ ಬಳಸುತ್ತಾರೆ. ಇಂದು ಈ ನೈಸರ್ಗಿಕ ಸಂಪತ್ತು ಕಣ್ಮರೆ ಯಾಗುತ್ತಿರುವ ಕಾಲದಲ್ಲಿ ಸಾಗರದ ಹೆಗಡೆ ಫಾರ್ಮನಲ್ಲಿ 'ಮಿಡಿ ಮಾವು ಉತ್ಸವ' ಒಂದನ್ನು ಏಪ್ರಿಲ್ 2007 ರಲ್ಲಿ ನಡೆಸಲಾಯಿತು. ಸಣ್ಣ ಮಟ್ಟದ ತಳಿ ಪ್ರದರ್ಶಕರು, ಕಸಿಗಿಡಗಳ ಮಾರಾಟಗಾರರಿಗೆ, ಗ್ರಾಮಾಂತರ ಮಟ್ಟದ ಉಪ್ಪಿನಕಾಯಿ ತಯಾರಕರಿಗೆ, ಸ್ತ್ರೀಶಕ್ತಿ / ಸ್ವಸಹಾಯ ಸಂಘಗಳಿಗೆ ಉಚಿತವಾಗಿ ಈ ಉತ್ಸವದಲ್ಲಿ ಮಳಿಗೆಗಳನ್ನು ನೀಡಲಾಗಿತ್ತು. ಪ್ರಥಮ ಬಾರಿಗೆ ಉತ್ಸವದಲ್ಲಿ 700ಕ್ಕೂ ಹೆಚ್ಚು ಮಿಡಿ ಮಾವು ಪ್ರದರ್ಶನಗೊಂಡಿತ್ತು. ಈ ಹಬ್ಬದಲ್ಲಿ ಮಾವಿನ ವಿವಿಧ ಬಗೆಯ ಅಡುಗೆ, ತಿನಿಸು ಮಾಡುವವರಿಗೂ ಒಂದು ಉತ್ತಮ ವೇದಿಕೆ ಒದಗಿಸಲಾಗಿತ್ತು. ಮೂಲ ಮಿಡಿ ಮಾವಿನ ತಳಿ ಸಂರಕ್ಷಕರು, ಹವ್ಯಾಸಿ ಸಂಶೋಧಕರು, ಉಪ್ಪಿನಕಾಯಿ ತಯಾರಿಕಾ ತಜ್ಞರು, ಕಸಿ ಪರಿಣಿತರು, ಬೆಳೆಗಾರರು, ಹಾಗೂ ಬೆಳೆಸುವವರ ನಡುವೆ ಸಂಪರ್ಕ ನಿರ್ಮಾಣ ಮಾಡುವ ಹೊಸ ಪ್ರಯತ್ನ ಈ ಮಿಡಿ ಮಾವು ಉತ್ಸವದಾಗಿತ್ತು. ಈಗಾಗಲೇ ನಶಿಸಿ ಹೋಗಿರುವ ಮಿಡಿ ಮಾವಿನ ಮರಗಳ ಉಪಯುಕ್ತತೆಯ ಕುರಿತು ಅರಿವು ಮೂಡಿಸುವುದು, ವಿಶೇಷ ತಳಿಗಳ ಶೋಧ, ಮಿಡಿ ಮಾವನ್ನು ವಾಣಿಜ್ಯ ಬೆಳೆಯಾಗಿ ಅಭಿವೃದ್ಧಿ ಪಡಿಸುವುದು, ಮೂಲ ತಳಿಯನ್ನು ಮೂಲ ಸ್ಥಳದಲ್ಲೇ ಉಳಿಸಬೇಕಾದ ಅವಶ್ಯಕತೆ ಇವೇ ಮೊದಲಾದವುಗಳು ಈ ಉತ್ಸವದ ಧ್ಯೇಯವಾಗಿತ್ತು. ಉತ್ಸವದಲ್ಲಿ ಅನುಭವಿ ಗಳಿಂದ ವಿಚಾರಗೋಷ್ಠಿ ಹಾಗೂ ಮಾಹಿತಿ, ಜೊತೆಗೆ ಕಸಿ ಗಿಡಗಳನ್ನು ದೊರಕಿಸಿ ಕೊಡಲಾಯಿತು. ಉತ್ತಮ ತಳಿ ಆಯ್ಕೆಗೆ ಅವಕಾಶವನ್ನು ಒದಗಿಸುವುದು, ಉತ್ತಮ ತಳಿಯ ಪ್ರದರ್ಶನ ಹಾಗೂ ಮಾರುಕಟ್ಟೆ ಸೌಲಭ್ಯ, ಮಿಡಿ ಮಾವನ್ನು ವಾಣಿಜ್ಯ ಬೆಳೆಯಾಗಿ ಬೆಳೆಯಲು ಸೂಕ್ತ ಮಾಹಿತಿ ಇವೇ ಮೊದಲಾದ ವಿಚಾರಗಳು ಈ ಮಿಡಿ ಮಾವು ಉತ್ಸವದಲ್ಲಿ ಮೂಡಿ ಬಂದಿರುತ್ತದೆ.

ಉಪ್ಪು ನೀರಿನಲ್ಲಿ ಚಟ್ಟು ಹಾಕಿದ ಮಿಡಿಗಳ ಪ್ರದರ್ಶನ, ಉಪ್ಪಿನಕಾಯಿ ತಯಾರಿಕೆಯಲ್ಲಿನ ಸ್ವಚ್ಛತೆ ಹಾಗೂ ಪ್ಯಾಕಿಂಗ್, ಸಂಸ್ಕರಣೆ ಕುರಿತಾಗಿ ತಜ್ಞರಿಂದ ಮಾಹಿತಿ ಲಭ್ಯವಿತ್ತು. ಪ್ರದರ್ಶನದಲ್ಲಿ ನಾಲ್ಕು ಮಂದಿ ಉಪ್ಪಿನ ಕಾಯಿ ತಜ್ಞರಿಂದ ಉತ್ತಮ ಮಿಡಿಮಾವಿನ ತಳಿ ಗುರುತಿಸಿ, ಅದಕ್ಕೆ ಬಹು ಮಾನ ನೀಡುವ ಕಾರ್ಯಕ್ರಮವಿತ್ತು. ಹೆಚ್ಚಿನ ಮಾಹಿತಿಗೆ: ಮಾವಿನ ಮಿಡಿ ಕುರಿತಾಗಿ ಇವರೇ ರೂಪಿಸಿದ ವೆಬ್ ಸೈಟ್ www.midimaavu.info. ಸಂಪರ್ಕಿಸ ಬಹುದು.

ಸುತ್ತಾಡುವ ಜೀವ ವೈವಿಧ್ಯ ಮೇಳ -2007

ಇದೇ ಜನವರಿ 14 ರಂದು ಡೆಕ್ಕನ್ ಡೆವಲಪ್‌ಮೆಂಟ್ ಸಂಸ್ಥೆ (ಡಿಡಿಎಸ್) ಯ ವತಿಯಿಂದ ಎಂಟನೇ "ಸುತ್ತಾಡುವ ಜೀವ ವೈವಿಧ್ಯ ಮೇಳ" ಮೇಡಕ್ ಜಿಲ್ಲೆಯ ಎಲೆಗೊಯಿ ಗ್ರಾಮದಲ್ಲಿ ಉದ್ಘಾಟನೆಗೊಂಡು, ಜಿಲ್ಲೆ ಯಾದ್ಯಂತ ಯಶಸ್ವಿ ಯಾತ್ರೆ ಕೈಗೊಂಡಿರುತ್ತದೆ. ಸಂಸ್ಥೆಯ ಕೇಂದ್ರವಾದ ಪಸ್ತಾಪುರದಲ್ಲಿ ಜೀವವೈವಿಧ್ಯ ಸಂರಕ್ಷಣೆ ಬಗೆಗಿನ ಕಾಯಿದೆ ಮತ್ತು ಕಾನೂ ನುಗಳ ವಿವರವಾದ ಎರಡು ದಿನಗಳ ಚರ್ಚೆ ನಡೆಸಲಾಯಿತು. ಇದೇ ಸಂದರ್ಭದಲ್ಲಿ ಹಿತ್ತಲ ಗಿಡದ ಸಂಪಾದಕರ ಮುಂದಾಳತ್ವದಲ್ಲಿ ರಾಷ್ಟ್ರೀಯ ಜೀವವೈವಿಧ್ಯ ಮಾರ್ಗಸೂಚಿ ಮತ್ತು ಕಾರ್ಯತಂತ್ರ ಕಾರ್ಯಕ್ರಮದಡಿ ಯಲ್ಲಿ ತಯಾರಿಸಿದ "ಸಾಕಾಣಿಕೆಗೊಳಪಟ್ಟಿರುವ ಜೀವ ವೈವಿಧ್ಯ ಸಂರಕ್ಷಣಾ ವರದಿ (Report of the Thematic Working Group on Domesticated Biodiversity)" ಯನ್ನು ಓರ್ವ ಪುಟ್ಟ ದಲಿತ ಬಾಲಕಿಯಿಂದ ಬಿಡುಗಡೆ ಮಾಡಲಾಯಿತು. ಈ ವರದಿಯನ್ನು ಹೈದರಾಬಾದಿನ ಡಿ.ಡಿ.ಎಸ್. ಸಂಸ್ಥೆ ಮುದ್ರಿಸಿ ಹೊರತಂದಿರುತ್ತದೆ.

ಅಹಮದಾಬಾದಿನ ಆಹಾರೋತ್ಸವ -ಅಗಲಿ ನಾಗೇಶರ ಅನುಭವ

ಕಳೆದ ನವೆಂಬರ್ ತಿಂಗಳ 26 ಮತ್ತು 27ನೆಯ ತಾರೀಖಿನಲ್ಲಿ ಅಹ್ಮದಾಬಾದಿನ ಇಂಡಿಯನ್ ಇನ್ಸಿಟ್ಯೂಟ್ ಆಫ್ ಮೇನೇಜ್‌ಮೆಂಟ್ (ಐಐಎಂ) ಆವರಣದಲ್ಲಿ 'ಸೃಷ್ಟಿ' (SRISTI)ಸಂಸ್ಥೆಯ ನೇತೃತ್ವದಲ್ಲಿ 'ಆಹಾರೋತ್ಸವ 2007'ನ್ನು ಆಯೋಜಿಸಲಾಗಿತ್ತು. ಬಿಸಿ ಬಿಸಿಯಾಗಿ ಸ್ಥಳದಲ್ಲೇ ತಯಾರಿಸಿ ಪೇಪರ್ ಪ್ಲೇಟಿನಲ್ಲಿ ಹಾಕಿ ಕೊಡುವ ಹಬೆಯಾಡುತ್ತಿರುವ ಉಪ್ಪಿಟ್ಟು, ಬಾಯಲ್ಲಿ ನೀರೂಡಿಸುವ ಘಮ್ಮೆನಿಸುವ ಪುಳಿಯೋಗರೆ, ಜೊತೆಗೆ ಕಣ್ಣೆದುರಿನಲ್ಲಿಯೇ ತಯಾರಿಸಿ ಕೊಡುತ್ತಿರುವ ಹೊಗೆಯಾಡುತ್ತಿರುವ ದೋಸೆ ಇದರ ಜೊತೆಗೆ ಚಟ್ನಿಪುಡಿ, ಶುಂಠಿಚಟ್ನಿ, ನೀರುಳ್ಳಿ ಚಟ್ನಿ ಅಥವಾ ತೆಂಗಿನಕಾಯಿ ಚಟ್ನಿ, ಯಾವುದು ಬೇಕು, ಇದೆಲ್ಲ ಆಂಧ್ರ ಪ್ರದೇಶದ ಸ್ಟಾಲಿನಲ್ಲಿ ಲಭ್ಯವಿತ್ತು.

ತಮಿಳುನಾಡಿನ ಗಿರಿಜನರ ಆರೋಗ್ಯದ ಗುಟ್ಟು 'ಆಯುರ್ವೇದಿಕ್ ಟಾನಿಕ್'ನ ಬಿಸಿ ಬಿಸಿ ಪೇಯವು ನಿಮಗೆ ಇಷ್ಟವೇ? ಅಥವ ಸಿಹಿಯಾದ ಪಾಯಸಂ ಆಗಲಿ ಪೊಂಗಲ್ ಆಗಲಿ ತಿನ್ನಲು ಇಷ್ಟವೇ ? ಹಾಗಿದ್ದರೆ ಅವೆಲ್ಲಾ ಆಂಧ್ರ ಸ್ಟಾಲಿನ ಪಕ್ಕದ ತಮಿಳ್ನಾಡು ಸ್ಟಾಲಿನಲ್ಲಿತ್ತು.ನಿಮಗೆ ಸುಪ್ರಸಿದ್ಧವಾದ ಬಕ್ರಿಯವರ ಲೆಮನ್ ಟೀ, ಗ್ರೀನ್‌ಟೀ ಅಥವಾ ಡಾರ್ಜಲಿಂಗ್ ಟೀಯ ಸ್ಯಾಂಪಲ್ ಕೊಡುತ್ತಾರೆ. ಸ್ನೇಹಿತರ ಜೊತೆಗೆ ಬೈಟೂ ಮಾಡಿ ಕುಡಿಯುವ ಹಾಗಿದ್ದರೆ ನೀವು ಡಾರ್ಜಲಿಂಗ್‌ಗೆ ಏಕೆ ಹೋಗಬೇಕು. ಇಲ್ಲೇ ಬಿಸಿಲಬೇಗೆಗೆ ನೆಲ್ಲಿ ಕಾಯಿ ಜೂಸ್ ಬೇಕೇ? ಆಮ್ಲದ ಕ್ಯಾಂಡಿ ಬೇಕೇ? ಆಮ್ಲದ ಮುರಬ್ಬ ಎಲ್ಲವೂ 'ಆಕಾಶ್ ಆಮ್ಲ'ದ ಸ್ಟಾಲಿನಲ್ಲಿತ್ತು.

ಸ್ವಲ್ಪ ಮುಂದೆ ಬನ್ನಿ ಅರೆ ಇಲ್ಲಿ ಮಲೆನಾಡಿನ ನಮ್ಮ ಆಲೆಮನೆಯ ಸುವಾಸನೆ ಭರಿತ ಸಿಹಿಸ್ವಾದದ ಸಾವಯವದಲ್ಲಿ ತಯಾರಾದ ಬೆಲ್ಲ ಹಾಗೂ ಮಸಾಲೆ ಹಾಕಿದ ಕಬ್ಬಿನ ಹಾಲು ಸೌರಾಷ್ಟ್ರದ ಶುಗರ್ ಕ್ಯಾನ್ ಸ್ಟಾಲಿನಲ್ಲಿತ್ತು. ಇದು ಬನಾರಸ್ ಸ್ಟಾಲು. ಅಲ್ಲಿ ಆಮ್ಲದ ಮುಖವಾಸ್, ಗರಿಗರಿಯಾದ ಸಮೋಸ ಇತ್ತು. ಇವರ ಸ್ಪೆಷಲ್ 'ಗ್ರೀನ್ ಲಿಲ್ಲಿ'ಚಾ. (ಗ್ರೀನ್ ಚಾ ಎಂದರೆ ನಮ್ಮೂರಿನ ಅಂಚೆ ಹುಲ್ಲಿನ ಜಾತಿಯ ಅಥವ ದರ್ಬೆಯ ಹುಲ್ಲಿನ ಜಾತಿಯ ಒಂದು ತುಂಡನ್ನು ಹಾಕಿ ಕುದಿಸಿ ತಯಾರಿಸುವ ಚಹಾ - ಲಿಲ್ಲಿ ಚಹಾ).

ನಿಮಗೆ ಎಷ್ಟೆಲ್ಲಾ ಬಗೆಯ ಐಸ್‌ಕ್ರೀಂ ಗೊತ್ತಿದೆ? ಆದರೆ ಚಿಕ್ಕು ಹಣ್ಣಿನ ಹೊಸ ಬಗೆಯ ಐಸ್‌ಕ್ರೀಂ ಆಗಲಿ ಒಂಟೆಯ ಹಾಲಿನ ಐಸ್‌ಕ್ರೀಂ ಆಗಲಿ ರುಚಿ ನೋಡಲಿಕ್ಕೆ ಇಲ್ಲಿಯ ರಾಜಸ್ಥಾನದ ಸ್ಟಾಲೇ ಸರಿ ಇದಕ್ಕೆ ರಾಜಾಸ್ಥಾನಕ್ಕೆ ಹೋಗುವುದು ಬೇಡ ! ಇದು ಪಾರ್ಸಿಗಳ ಸ್ಟಾಲು. ಕೃತಕ ಬಣ್ಣಹಾಕಿದ ಪಲಾವ್ ಮತ್ತು ಫೀರ್‌ಸು ಇಲ್ಲ ಸ್ವಾಮಿ! ಇದು ನೈಸರ್ಗಿಕ ಬಣ್ಣದ್ದು. ಸುಮಾರು ಎರಡು ಕೆ.ಜಿ. ಅಕ್ಕಿಯ ಅನ್ನಕ್ಕೆ ಕೇವಲ 200 ಗ್ರಾಂ. ಸಕ್ಕರೆ ಮತ್ತು ತುಪ್ಪವನ್ನು ಹಾಕಿ ಹುರಿದು, ನೈಸರ್ಗಿಕ ಕಂದುಬಣ್ಣ ಬರಿಸಿ, ನಂತರ ತಯಾರಿಸುವ ಫೀರೈಸ್ ಪಲಾವ್‌ಗಳು ಪಾರ್ಸಿಗಳ ಮನೆಗಳಲ್ಲಿ ಅಲ್ಲದೆ ಬೇರೆಲ್ಲೂ ಸಿಗುವುದೇ ಇಲ್ಲ. ಪಾರ್ಸಿಗಳ ಶ್ರೀಮಂತ ಜೀವನ ಶೈಲಿಯಂತೆ ಅಲ್ಲಿ ಸಹಾ ಪಲಾವಿಗೆ ಪ್ರತಿ ಪ್ಲೇಟಿಗೆ ರೂ. 40 ಮಾತ್ರ !

ಈ ಮೇಲೆ ಹೇಳಿದ ನಮ್ಮ ದೇಶದ ಎಲ್ಲಾ ರಾಜ್ಯಗಳ ಮೂಲೆ ಮೂಲೆಗಳಲ್ಲಿ ಸಿಗುವ ಸಾಂಪ್ರದಾಯಿಕ ಅಡುಗೆಯ ರಸರುಚಿ ಒಂದೇ ಕಡೆ ಸಿಗುವಂತಿದ್ದರೆ ಎಷ್ಟು ಚನ್ನ ಅಲ್ಲವೆ? ಈ ಎಲ್ಲವನ್ನು ಒಂದೇ ಕಡೆ ಸಿಗುವಂತೆ ಸಾಕಾರ ಮಾಡಿದ್ದು ಅಹಮದಾಬಾದಿನ 'ರಾಷ್ಟ್ರೀಯ ಅನುಶೋಧನಾ ಸಂಸ್ಥೆ' (National Innovation Foundation) ಮುಖ್ಯಸ್ಥರಾದ ಪ್ರೊ. ಅನಿಲ್ ಗುಪ್ತ ನೇತೃತ್ವದ ಸೃಷ್ಟಿ(SRISTI) ಸಂಸ್ಥೆ.

ಅಹಮದಾಬಾದಿನ ಇಂಡಿಯನ್ ಇನ್ಸಿಟ್ಯೂಟ್ ಆಫ್ ಮೇನೇಜ್ ಮೆಂಟ್‌ನ ಹೊಸ ಕ್ಯಾಂಪಸ್‌ನ ಪಕ್ಕದ ಬೃಹತ್ ಮೈದಾನದಲ್ಲಿ ನಿರ್ಮಾಣವಾದ ಸುಮಾರು 500-600 ಸುತ್ತಲಿನ ಸ್ಟಾಲುಗಳು ಮತ್ತು ಮಧ್ಯಭಾಗದಲ್ಲಿ ಎರಡು ಕಡೆಯಲ್ಲಿ ವಿಶೇಷ ಪೆಂಡಾಲ್ ಆಯೋಜಿಸಲಾಗಿತ್ತು. ಬೃಹತ್ ಸ್ವಾಗತ ಫಲಕದ ಪ್ರಮುಖ ದ್ವಾರದಿಂದ ಪ್ರವೇಶಿಸಿದರೆ, ಮೊದಲು 3-4 ರಿಜಿಸ್ಟ್ರೇಶನ್ ಕೌಂಟರುಗಳನ್ನು ದಾಟಿ, ಮುಖ್ಯ ವೇದಿಕೆಯವರೆಗೆ ಮತ್ತು ಎಲ್ಲ ಸ್ಟಾಲುಗಳವರೆಗೆ ಹಸಿರು ಬಣ್ಣದ ನೆಲಹಾಸು ಕೊಂಡೊಯ್ಯುತ್ತಿತ್ತು. ಆಹ್ವಾನಿತ ಅತಿಥಿಗಳನ್ನು ಬಿಟ್ಟರೆ ಉಳಿದ ವೀಕ್ಷಕರಿಗೆ ರೂ. 10 ಪ್ರವೇಶ ಧನ ನಿಗದಿ ಪಡಿಸಲಾಗಿತ್ತು. ಈ ಆಹಾರೋತ್ಸವ ನಡೆದ ಆವರಣದಲ್ಲಿ ಎಲ್ಲೂ ಸಹಾ ಒಂದೇ ಒಂದು ಚೂರು ಪ್ಲಾಸ್ಟಿಕ್ ತ್ಯಾಜ್ಯ ಇರಲಿಲ್ಲ ಎಂಬುದು ಪ್ರೊ. ಗುಪ್ತಾರ ಪರಿಸರ ಕಾಳಜಿಯ ಸಂಕೇತವಾಗಿತ್ತು.

'ಬದುಕಲಿಕ್ಕಾಗಿ ತಿನ್ನುವುದೋ ಅಥವಾ ತಿನ್ನಲಿಕ್ಕಾಗಿಯೇ ಬದುಕುವುದೋ' - ಎಂದು ನಿಮಗೆ ಈ ಆಹಾರ ಮೇಳ ನೋಡಿ ಅನಿಸಿರಬಹುದು. ಆದರೆ ಇದರ ಮುಖ್ಯ ಉದ್ದೇಶವೇ ಬೇರೆಯಾಗಿತ್ತು. ಅತಿ ವೇಗವಾದ ಈ ನಾಗರಿಕ ಜಗತ್ತಿನಲ್ಲಿ ಜಾಗತೀಕರಣದ ಕೊಡುಗೆ ಅಥವ ಪಾಶ್ಚಾತ್ಯರ ಕೊಡುಗೆಯಾದ ಫಾಸ್ಟ್‌ಫುಡ್ ಕಲ್ಚರ್‌ಗೆ ವಿರುದ್ಧವಾದ ದೇಶೀಯ ಫಾಸ್ಟ್‌ಫುಡ್‌ನ್ನು (ನಮ್ಮ ಅಡುಗೆಗಳನ್ನು) ಪರಿಚಯಿಸುವ ಉದ್ದೇಶ ಇದಾಗಿತ್ತು. ನಮ್ಮ ಆರೋಗ್ಯಕರವಾದ ಸಾಂಪ್ರದಾಯಿಕ ತಿಂಡಿ ತಿನುಸುಗಳನ್ನು ಇಂದಿನ ಪಿಜ್ಜಾ ಬರ್ಗರ್‌ಗಳು ಬೃಹನ್‌ನಗರಗಳಲ್ಲಿ ನೇಪಥ್ಯಕ್ಕೆ ಕಳಿಸುತ್ತಾ ಇವೆ. ಇದನ್ನು ತಡೆದು ನಮ್ಮ ನಗರ ವಾಸಿಗಳನ್ನು ಪುನಃ ನಮ್ಮತನಕ್ಕೆ ತರುವ ಉದ್ದೇಶ ಒಂದಾದರೆ, ಇನ್ನೊಂದು ಉದ್ದೇಶ ಸಾವಯವ ಉತ್ಪನ್ನಗಳ ಮಾರುಕಟ್ಟೆ ಮತ್ತು ಪ್ರಚಾರವೂ ಆಗಿತ್ತು. ಬೇರೆ ಬೇರೆ ರಾಜ್ಯಗಳ ಬೇರೆ ಬೇರೆ ಸ್ಟಾಲುಗಳಲ್ಲಿ ಆಯಾ ರಾಜ್ಯಗಳ ರೈತರುಗಳು ಬೆಳೆದು ತಂದ ಅನೇಕ ಸಾವಯವ ಉತ್ಪನ್ನಗಳನ್ನು ಮಾರಲಾಗುತ್ತಿತ್ತು. ನೇರವಾಗಿ ಬೆಳೆಗಾರರಿಂದ ಪಟ್ಟಣದ ಬಳಕೆದಾರರಿಗೆ, ವಿಷರಹಿತವಾದ, ರುಚಿಕರವಾದ ಸಾವಯವದಲ್ಲಿ ಬೆಳೆದ ಆಹಾರ ಧಾನ್ಯಗಳನ್ನು, ಬೆಲ್ಲ, ಬೇಳೆ ಕಾಳು ಹಣ್ಣು ಹಂಪಲುಗಳನ್ನು ಒದಗಿಸಲಾಯಿತು. ಮಾನಸಿಕ ಅಸ್ವಸ್ಥ ಮಕ್ಕಳಿಂದ ತಯಾರಿಸಿದ ಉತ್ಪನ್ನಗಳು ನಮ್ಮ ಸಮಾಜದ ಒಂದು ಮುಖದ ಪರಿಚಯ ಮಾಡಿಸುವುದರ ಜೊತೆಗೆ ಅವರ ಕ್ರಿಯಾಶಕ್ತಿಯ ಇನ್ನೊಂದು ಮುಖದ ಪರಿಚಯ ಮಾಡಿಸುತ್ತಿತ್ತು. 'ಉತ್ಥಾನ್' ಮಾನಸಿಕ ಅಸ್ವಸ್ಥ ಮಕ್ಕಳ ಸಂಸ್ಥೆ. ಅಲ್ಲಿನ ಮಕ್ಕಳ ಉತ್ಪನ್ನಗಳಾದ ನ್ಯೂಸ್ ಪೇಪರ್ ಕ್ಯಾರಿಬ್ಯಾಗ್, ವಾಟರ್ ಕ್ಯಾನ್ ಕ್ಯಾರಿಬ್ಯಾಗ್, ಆಟೋಗ್ರಾಫ್ ಡೈರಿ ಹಾಗೂ ಬ್ರೌನ್ ಪೇಪರ್ ಬ್ಯಾಗುಗಳು ಆಕರ್ಷಣೆಗಳಿಗಿಂತ ಅನುಕಂಪದ ಅಲೆಯಲ್ಲಿ ಹೆಚ್ಚು ಮಾರಾಟ ಆಗುತ್ತಿತ್ತು. 2002ರ ಗುಜರಾತ್‌ನ ಕೋಮುಗಲಭೆಯಲ್ಲಿ ನೊಂದವರ ತಂದೆ ತಾಯಿಗಳನ್ನು ಕಳೆದುಕೊಂಡ ಮಕ್ಕಳ ಕ್ಷೇಮಾಭ್ಯುದಯ ಸಂಸ್ಥೆಯೇ 'ಅರ್ಜೂ' (Arjoo). ಇದು ಗುಜರಾತಿನ ಬೆಹ್ರಾಂಪುರದಲ್ಲಿದೆ. ಈ ಸಂಸ್ಥೆಯ 5 ರಿಂದ 14 ವರ್ಷ ವಯಸ್ಸಿನ ಮಕ್ಕಳು ಹೂವಿನ ಎಸಳುಗಳನ್ನು ಅರೆದು ಪೇಪರ್‌ಗಳನ್ನು ತಯಾರಿಸಿ ಅದನ್ನು ಮೌಲ್ಯವರ್ಧಿತವಾಗಿ ಮಾಡಿ, ಗ್ರೀಟಿಂಗ್ ಕಾರ್ಡುಗಳು, ಪೇಪರ್ ಬ್ಯಾಗು ಹಾಗೂ ಡೈರಿ ಕವರ್‌ಗಳನ್ನು ಮಾಡಿ ಇಲ್ಲಿ ಪ್ರದರ್ಶನಕ್ಕೆ ಇರಿಸಿದ್ದರು. ಸಾಬರ್‌ಮತಿ ಗಾಂಧಿ ಆಶ್ರಮದ 'ವಿಕಲ್ಪ' ಸಂಸ್ಥೆಯ ಆರ್ಗಾನಿಕ್ ಫಾರಂನ ಮೆಣಸಿನ ಪುಡಿ - ಜೀರ್ಣಕಾರಿ ಹಾಜ್‌ಮೂಲದಂತಹ ಮಾತ್ರೆಗಳು, ಜೇನು, ಸಾಬೂನು, ಆರ್ಗಾನಿಕ್ ಬೆಲ್ಲ ಇವೆಲ್ಲಾ ನೋಡುವ ಹಾಗಿತ್ತು. ಅರವಿಂದ ಪಟೇಲರ ಸಂಶೋಧನೆಯನ್ನು 'ಸೃಷ್ಟಿ' ಸಂಸ್ಥೆಯ ಮುಖಾಂತರ ಕೊಂಡು ಸೋಲಾರ್ ತಂತ್ರಜ್ಞಾನವನ್ನು ಅದಕ್ಕೆ ಸೇರಿಸಿ ಅಭಿವೃದ್ಧಿ ಪಡಿಸಿದ 'ಯೂನಿಕೂಲ್'

ಸಂಸ್ಥೆಯ ವಿದ್ಯುತ್ ಇಲ್ಲದೆ ತಣ್ಣೀರನ್ನು ಪಡೆಯುವ ವಾಟರ್ ಕೂಲಿಂಗ್ ಸಿಸ್ಟಂ ಯಂತ್ರ ಉಪಯುಕ್ತವೆನಿಸಿತು. ಸೌಂದರ್ಯ ಸಾಧನವಾದ ಆಯುರ್ವೇದಿಕ್ ಫೇಸ್‌ಪ್ಯಾಕ್, ಮೈತ್ರಿಕೆಯ ಲೇಪನದ ಫೇಸ್ ಪ್ಯಾಕ್, ಬಾಡಿ ಲೋಷನ್ ಒಂದು ಸ್ಟಾಲಿನಲ್ಲಿದ್ದರೆ ಇನ್ನೊಂದೆಡೆ ಸಾಂಪ್ರದಾಯಿಕ ರಾಜಸ್ಥಾನಿ ಬೊಂಬೆಗಳ ಪೊಪೆಟ್‌ಶೋವನ್ನು ಸನಜಿ ಭೀಮಾಜಿ ಬಟ್‌ರವರು ನಡೆಸಿಕೊಡುತ್ತಿದ್ದರು. ಇಡೀ ಮೈದಾನದಲ್ಲಿ ಓಡಾಡುತ್ತಿದ್ದ ಕೀಲು ಕುದುರೆ, ಬೊಂಬೆ ನೃತ್ಯವು ಸಾಂಸ್ಕೃತಿಕ ಮೇಳದ ನೆನಪು ಮಾಡುತ್ತಿತ್ತು.

ಸಕ್ಕರೆಯ 300 ಪಟ್ಟು ಸಿಹಿಯಾದ ಮಧುಮೇಹಿ ರೋಗಿಗಳೂ ಉಪಯೋಗಿಸಹುದಾದ ಸ್ಟೀವಿಯಾ ಶುಗರ್ ಒಂದು ರೀತಿಯ ಸಿಹಿ ತುಳಸಿ ಸಸ್ಯ (*Stevia Rebadina*)ದ ಮಹತ್ವಪೂರ್ಣ ಉತ್ಪನ್ನ. ಇದರ ಇನ್ನೊಂದು ರೂಪ ಸ್ಟೀವಿಯಾ ಪೆನ್. ಈ ಪೆನ್ನಿನಿಂದ ಒಂದು ಹನಿ ದ್ರವವನ್ನು ಒಂದು ಲೋಟ ಕಾಫಿ ಅಥವ ಚಹಾಕ್ಕೆ ಬೆರೆಸಿದರೆ ಸ್ವಾದಿಸ್ಟಪೂರ್ಣ ಸಿಹಿಯಾದ ಮಧುಮೇಹಿಗಳು ಬಳಸಬಹುದಾದ ಕಾಫಿ ಅಥವ ಟೀ ತಯಾರಾಗುತ್ತದೆ. ಇವೆಲ್ಲ ಜಲಂದರ್‌ನ ಒಂದು ಸಂಸ್ಥೆ 'ಫಾರ‍್ಮರ್ ಸೇವಾ ಗ್ರೂಪ್'ನ ಉತ್ಪನ್ನ. ಕೇರಳದ ಹಸಿರು ಏಲಕ್ಕಿ ಕಿಲೋಗೆ ರೂ.1200, ತಮಿಳುನಾಡಿನ ಕರಿ ಮೆಣಸು ರೂ.300 ಹಾಗೂ ತೊಳೆದ ಬಿಳಿ ಮೆಣಸು 400ರೂ. ಗೆ ಮಾರಾಟವಾಗಿ ಅಲ್ಲಿಯ ರೈತರಿಗೆ ಖುಷಿ ತಂದಿತು. ಗ್ರಾಮೀಣ ಭಾಗದ ಉತ್ಪನ್ನಗಳನ್ನು ಮಧ್ಯವರ್ತಿಗಳ ನೆರವಿಲ್ಲದೆ, ಅತ್ಯುತ್ತಮ ಮಾರುಕಟ್ಟೆ ಮತ್ತು ಈ ಉತ್ಪನ್ನಗಳನ್ನು ಆಧುನಿಕ ನಗರ ಮಾರುಕಟ್ಟೆಗೆ ಪರಿಚಯಿಸುವ ಕೆಲಸ ಈ ಆಹಾರಮೇಳ ಮಾಡಿತ್ತು.

ಒಂದು ರೀತಿಯಲ್ಲಿ ಉತ್ತರ – ದಕ್ಷಿಣ ಮತ್ತು ಪೂರ್ವ – ಪಶ್ಚಿಮದ ಜನರು ಬೆರೆಯುವಂತಹ ಅವಕಾಶ, ಅಲ್ಲಿಯ ಜನರು ಅದರಲ್ಲೂ ವಿಶೇಷವಾಗಿ ಹೆಣ್ಣು ಮಕ್ಕಳು ಆಹಾರ ತಯಾರಿಸುವ ಕ್ರಮ, ಭಾಷೆಗಳ ತೊಡಕ್ಕಿದ್ದರೂ ಸಹಾ, ಅವುಗಳ ಹೆಸರು ಹೇಳುವ, ಅದನ್ನು ತಯಾರಿಸಲು ಬೇಕಾಗುವ ವಸ್ತುಗಳನ್ನು ಹೇಳುವ ಪರಿ, ತಯಾರಿಸುವ ರೀತಿಯನ್ನು ವಿವರಿಸುವ ಉತ್ಸಾಹವು ವ್ಯಾವಹಾರಿಕ ಆಗಿರಲಿಲ್ಲ, ಬದಲಿಗೆ ಆತ್ಮೀಯತೆಯ ಕಂಪು ಬೀರುತ್ತಿತ್ತು. ಕೌಟುಂಬಿಕ ವಾತಾವರಣ ಕಾಣುತ್ತಿತ್ತು. ಒಟ್ಟಿನಲ್ಲಿ ಬೃಹತ್ ಭಾರತವನ್ನು ಒಂದು ಬೃಹತ್ ಗ್ರಾಮವಾಗಿ ಪರಿವರ್ತನೆ ಗೊಳಿಸುವಲ್ಲಿ ಪದ್ಮಶ್ರೀ ಪ್ರೊ. ಅನಿಲ್ ಗುಪ್ತಾರ ನೇತೃತ್ವದ 'ಸೃಷ್ಟಿ' ಸಂಸ್ಥೆ ಯಶಸ್ವಿಯಾಗಿರುತ್ತದೆ ಎಂದರೆ ತಪ್ಪಾಗಲಾರದು.

(ಮಲೆನಾಡಿನ ಪ್ರಗತಿಪರ ರೈತರಾದ ಅಗಲಿ ನಾಗೇಶ್‌ರು ಕಳೆದ ನವೆಂಬರನಲ್ಲಿ ಅಹಮದಾಬಾದಿನಲ್ಲಿ 'ಸೃಷ್ಟಿ' ಸಂಸ್ಥೆಯಿಂದ ಸನ್ಮಾನಿತಗೊಂಡಿದ್ದರು. ಆ ಸಂದರ್ಭದಲ್ಲಿ ಭಾಗವಹಿಸಿದ ಆಹಾರ ಮೇಳದ ಕುರಿತ ಅವರ ಅನುಭವದ ಲೇಖನ)

* *

ಚಂದಾ ವಿವರ

	ವಾರ್ಷಿಕ	ಅಜೀವ (ಹತ್ತು ವರ್ಷಗಳ ಕಾಲ)
ವಿದ್ಯಾರ್ಥಿಗಳು / ನಿರುದ್ಯೋಗಿಗಳು	ರೂ.50/-	ರೂ.400/-
ರೈತರು	ರೂ.60/-	ರೂ.500/-
ಇತರರು	ರೂ.75/-	ರೂ.600/-
ಸಂಸ್ಥೆಗಳು	ರೂ.350/-	ರೂ.2500/-
ಪೋಷಕರು	ರೂ.5000/- ಮತ್ತು ಅಧಿಕ	

(ವಿ.ಸೂ. ಹಿತ್ತಲಗಿಡದ ನೀತಿ ತತ್ವಗಳಿಗೆ ಹೊಂದಿಕೆಯಾಗುವ ಸಮಾನ ಮನಸ್ಕ ವ್ಯಕ್ತಿ ಮತ್ತು ಸಂಸ್ಥೆಗಳಿಂದ ಮಾತ್ರ ಪೋಷಕವಂತಿಕೆ ಸ್ವೀಕರಿಸಲಾಗುವುದು)

ಚಂದಾ ಹಣವನ್ನು ಅಂಚೆ (M.O.) ಅಥವಾ ಡ್ರಾಫ್ಟ್/ಚೆಕ್ ಮೂಲಕ *'ಸಂಪಾದಕರು, ಹಿತ್ತಲಗಿಡ, ಬೆಂಗಳೂರು'* ಈ ವಿಳಾಸಕ್ಕೆ ಕಳುಹಿಸಬೇಕು. ತಮ್ಮ ವಿಳಾಸ, ಪಿನ್‌ಕೋಡ್ ಮತ್ತು ವೃತ್ತಿಯನ್ನು ಸರಿಯಾಗಿ ಬರೆದು ಕಳುಹಿಸಬೇಕು. ಚಂದಾ ಹಣವನ್ನು ನವೀಕರಿಸುವಾಗ ಸ್ಪಷ್ಟವಾಗಿ ತಿಳಿಸತಕ್ಕದ್ದು.

* *

Printed by M/s Replica Offset Printers, Industrial Town, Rajajinagar, Bangalore - 560 044
Published by Smt. K. Meenakshi (Owner) at No.399, 14-B Cross, New Town Yelahanka, Bangalore-560 064,
Edited by Dr. T.N. Prakash Kammaradi

ತಳ ಮಟ್ಟದ ಜನರ ಶೋಧನೆಗಳ ಹುಡುಕಾಟದ ಸ್ಪರ್ಧೆ

ರಾಷ್ಟ್ರೀಯ ಅನುಶೋಧನೆ ಪ್ರತಿಷ್ಠಾನ (National Innovation Foundation)

ರಾಷ್ಟ್ರೀಯ ಮಟ್ಟದ ಆರನೆ ಸ್ಪರ್ಧೆಗಳು

ರಾಷ್ಟ್ರೀಯ ಅನುಶೋಧನೆ ಪ್ರತಿಷ್ಠಾನ

ಭಾರತ ಸರ್ಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ವಿಭಾಗ **(Department of Science and Technology)** ಈ ಪ್ರತಿಷ್ಠಾನವನ್ನು ಸ್ಥಾಪಿಸಿದ್ದು, ಇದರ ಮೂಲ ಉದ್ದೇಶ ತಳಮಟ್ಟದ ಸಂಶೋಧಕರನ್ನು ಗುರುತಿಸಿ, ಗೌರವಿಸಿ, ಪುರಸ್ಕರಿಸುವುದಾಗಿರುತ್ತದೆ. ಈ ಮೂಲಕ ಸುಸ್ಥಿರ ತಂತ್ರಜ್ಞಾನಕ್ಕೆ ಸಂಬಂಧಿಸಿದಂತೆ ಭಾರತವನ್ನು ಸ್ವಾವಲಂಬಿ ಹಾಗೂ ತೃತೀಯ ಜಗತ್ತಿಗೇ ನೇತೃತ್ವವಹಿಸಲು ಸಿದ್ಧವಾಗಿರುವಂತಹ ರಾಷ್ಟ್ರವನ್ನಾಗಿ ರೂಪಿಸುವುದಾಗಿದೆ. ಪ್ರತಿಷ್ಠಾನವು ತಳಮಟ್ಟದ ಸಂಶೋಧಕರಿಗೆ ಮೂರು ರೀತಿಯಲ್ಲಿ ನೆರವಾಗಲಿದೆ. ಅ) ಆಧುನಿಕ ವಿಜ್ಞಾನ ಹಾಗೂ ತಂತ್ರಜ್ಞಾನದ ಪ್ರವೀಣರೊಂದಿಗೆ ಸಂಪರ್ಕ ಕಲ್ಪಿಸುವುದು, ಆ) ಶೋಧನೆಗಳನ್ನು ಉದ್ದಿಮೆಯನ್ನಾಗಿ ಪರಿವರ್ತಿಸುವುದು, ಇ) ಬೌದ್ಧಿಕ ಸನದಿನ ಹಕ್ಕು **(Intellectual Property Rights)** ಶೋಧಕರಿಗಾಗಿ ದೊರೆಯುವಂತೆ ಮಾಡಿ, ಅವರಿಗೆ ಬೇಕಾದ ಮೂಲಧನ ಒದಗಿಸುವಲ್ಲಿ ನೆರವಾಗುವುದು. ಪ್ರತಿಷ್ಠಾನವು ರಾಷ್ಟ್ರಮಟ್ಟದಲ್ಲಿ, ತಳಮಟ್ಟದ ಸಂಶೋಧಕರು ಹಾಗೂ ಇತರರ ಸಂಶೋಧನೆಗಳ ದಾಖಲಾತಿ ಸಿದ್ಧಪಡಿಸುವ ಉದ್ದೇಶ ಹೊಂದಿದ್ದು; ನಮ್ಮ ಸಮಾಜದಲ್ಲಿನ ಮೂಲೆ ಮೂಲೆಯ ಶೋಧಕರಿಗೆ ನೆರವಾಗುವಂತಹ, ಕಾಯ್ದೆ ಕಾನೂನಿನ ರೂಪುರೇಷೆ ಸಿದ್ಧಪಡಿಸಲಿದೆ.

ಪ್ರಶಸ್ತಿ

ತಳಮಟ್ಟದ ಜನರ ಶೋಧನೆಗಳ ಹುಡುಕಾಟದ ರಾಷ್ಟ್ರೀಯ ಸ್ಪರ್ಧೆಯಲ್ಲಿ ಅತ್ಯುತ್ತಮ ಅನುಶೋಧನೆಗೆ ರೂಪಾಯಿ 1,00,000 ಮೊದಲ ಬಹುಮಾನ, ರೂಪಾಯಿ 50,000 ಹಾಗೂ ರೂಪಾಯಿ 25,000, 2ನೇ ಮತ್ತು 3ನೇ ಬಹುಮಾನ ಕೊಡಲಾಗುವುದು. ಜೊತೆಗೆ ರೂಪಾಯಿ 10,000 ದ ಹಲವಾರು ಪ್ರೋತ್ಸಾಹಕ ಬಹುಮಾನಗಳನ್ನು ನೀಡಲಾಗುವುದು. ಶೋಧನೆಗಳ ಜೊತೆಯಲ್ಲಿ, ಇಂತಹ ತಳಮಟ್ಟದ ಶೋಧಕರನ್ನು ಪರಿಚಯಿಸಿದ ವ್ಯಕ್ತಿ ಹಾಗು ಸಂಸ್ಥೆಗಳಿಗೆ 50,000, 25,000 ಮತ್ತು 10,000ಗಳ ಮೂರು ವಿಶೇಷ ಬಹುಮಾನಗಳಿವೆ. ಹಾಗೇ, ರಾಜ್ಯ ಮಟ್ಟದಲ್ಲೂ ಬಹುಮಾನಗಳನ್ನು ನೀಡಲಾಗುವುದು. ಬಹುಮಾನ ವಿಜೇತ ಶೋಧನೆಗಳು **ರಾಷ್ಟ್ರೀಯ ದಾಖಲಾತಿ ಪುಸ್ತಕ** (National Register)ದಲ್ಲಿ ಸ್ಥಾನ ಪಡೆಯಲಿವೆ. ತಳಮಟ್ಟದ ಶೋಧನೆ ಹಾಗೂ ಶೋಧಕರಿಗೆ ಸಾಕಷ್ಟು ಪ್ರಚಾರ ಹಾಗೂ ಪ್ರಾಮುಖ್ಯತೆಯನ್ನು ಕೂಡಾ ನೀಡಲಾಗುವುದು.

ಸ್ಪರ್ಧೆ

ಯಾವುದೇ ರೀತಿಯ ಸಾಂಸ್ಥಿಕ ಮೂಲದ ನೆರವು, ವ್ಯವಸ್ಥಿತ ವಿಜ್ಞಾನ ಮತ್ತು ತಂತ್ರಜ್ಞಾನ ಸಂಸ್ಥೆಗಳ ಮಾರ್ಗದರ್ಶನ ಇಲ್ಲದೇ ರೈತರು, ಬುಡಕಟ್ಟು ಜನಾಂಗಗಳು, ಹೈನುಗಾರರು, ಕರಕುಶಲಕರ್ಮಿಗಳು, ಮಹಿಳೆಯರು, ಬೆಸ್ತರು ಇಂತಹವರೇ ಮೊದಲಾದ ಸ್ಥಳೀಯ ಮಟ್ಟದಲ್ಲಿ ವ್ಯಕ್ತಿ, ಗುಂಪು ಮತ್ತು ಸಮುದಾಯಗಳು ತಮ್ಮ ಕಸುಬು, ಕೃಷಿ, ಪರಿಸರ, ಜೀವ ವೈವಿಧ್ಯತೆಗಳನ್ನು ಕಾಪಾಡುವಲ್ಲಿ ಕಂಡು ಕೊಂಡಿರುವ ವಿಧಿ ವಿಧಾನಗಳು, ಶೋಧಿಸಿರುವ ಉಪಕರಣಗಳು, ಜಾನುವಾರು ಚಿಕಿತ್ಸೆ, ಬೆಳೆ ಸಂರಕ್ಷಣಾ ಪದ್ಧತಿಗಳು, ಕಡಿಮೆ ವೆಚ್ಚದ ಯಂತ್ರೋಪಕರಣಗಳು, ಇನ್ನಾವುದೇ ರೀತಿಯ ಸಾಮಾನ್ಯ ಜನರ ಅನುಕೂಲಕ್ಕಾಗಿ ಮೂಡಿ ಬಂದಿರುವ ಅನುಶೋಧನೆಗಳನ್ನು ಸ್ಪರ್ಧೆಗೆ ಕಳುಹಿಸ ಬಹುದು. ಆದರೆ ಸಾಮಾಜಿಕವಾಗಿ ಒಪ್ಪಿತವಲ್ಲದ ಹಾಗೇ ಪರಿಸರದ ಮೇಲೆ ಹಾನಿಯಿರುವ ಅನುಶೋಧನೆಗಳನ್ನು ಈ ಸ್ಪರ್ಧೆಯಲ್ಲಿ ಸ್ವೀಕರಿಸಲಾಗುವುದಿಲ್ಲ. ಈ ಸ್ಪರ್ಧೆಗೆ ಸ್ವೀಕೃತವಾದ ಅನುಶೋಧನೆಗಳನ್ನು ಬೇರೆಯವರೊಡನೆ ಹಂಚಿಕೊಳ್ಳುವ ಮತ್ತು ವಾಣಿಜ್ಯಗೊಳಿಸುವ ಬಗ್ಗೆ ಹಾಗೇ ಈ ಮೂಲಕ ಬರಬಹುದಾಗಿರುವ ಲಾಭಾಂಶದ ಹಂಚಿಕೆ, ಈ ಎಲ್ಲದರ ಬಗ್ಗೆ ಇಂತಹ ಅನುಶೋಧನೆಗಳ ನೈಜ ವಾರಸುದಾರರಿಂದ **'ಪೂರ್ವ ಸೂಚಿತ ಸಮ್ಮತಿ'** *(Prior Informed Consent)* ಪಡೆದ ನಂತರವೇ ಮುಂದುವರೆಯಲಾಗುವುದು.

ಭಾಗವಹಿಸುವ ವಿಧಾನ

ಅನುಶೋಧನೆಗಳಿಗೆ ಸಂಬಂಧಿಸಿದಂತೆ ವ್ಯಕ್ತಿ ಮತ್ತು ಗುಂಪುಗಳು ಎಷ್ಟು ಬೇಕಾದರೂ ಮಾಹಿತಿಗಳನ್ನು ಕಳುಹಿಸಿಕೊಡಬಹುದು. ಪ್ರವೇಶ ಪತ್ರವು ಶೋಧನೆಯ ವಿವರ, ಕಾರ್ಯಭೂತ ವ್ಯಕ್ತಿ ಅಥವಾ ಸಮುದಾಯದ ಸಂಪೂರ್ಣ ಪರಿಚಯ, ಶೋಧನೆ ಮತ್ತು ಕಾರ್ಯಭೂತ ವ್ಯಕ್ತಿಯ ಹಿನ್ನೆಲೆ ಇವೆಲ್ಲವುಗಳ ಕುರಿತಂತೆ ಸಾಧ್ಯವಾದಷ್ಟು ಮಟ್ಟಿನ ವಿವರವನ್ನು ಹೊಂದಿರಬೇಕು. ಛಾಯಾ ಚಿತ್ರಗಳು ಮತ್ತು ಮಾದರಿಗಳನ್ನೂ ಸಹ ಕಳಿಸಬಹುದು. ಈ ಶೋಧನೆಯನ್ನು ಬಳಕೆ ಮಾಡುತ್ತಿದ್ದಲ್ಲಿ ಸುಮಾರು ಎಷ್ಟು ಮಂದಿ ಮತ್ತು ಎಷ್ಟು ಕಾಲದಿಂದ ಬಳಕೆ ಮಾಡಲಾಗುತ್ತಿದೆ ಎಂದು ವಿವರ ಕೂಡಾ ಅಗತ್ಯ. ಶೋಧಕ ಮತ್ತು ಶೋಧನೆಗಳ ಚಿತ್ರ, ಫೋಟೋಗಳನ್ನು ಸಾಧ್ಯವಾದಲ್ಲಿ ವಿಡಿಯೋವನ್ನು ಪ್ರವೇಶ ಪತ್ರದೊಂದಿಗೆ ಕಳಿಸಿದರೆ ಉತ್ತಮ. ಆರನೆ ಸ್ಪರ್ಧೆಗೆ ಡಿಸೆಂಬರ್ 2008ರವರೆಗೆ ಅವಕಾಶವಿದೆ. ಅನುಶೋಧನೆಗಳನ್ನು 'ಹಿತ್ತಲಗಿಡ' ಅಥವಾ National Coordinator, National Innovation, Foundation Bungalow No.1 Satellite Complex, Permchand Nagar Road, Ahmedabad - 380015 Gujarat. e-mail : **campaign@nifindia.org** ಇಲ್ಲಿಗೆ ಕಳುಹಿಸಬಹುದು.

ಪತ್ರಿಕೆ ನೋಂದಣಿ ಸಂಖ್ಯೆ 66842/96

ತೆರೆದ ಅಂಚೆ

ಗೆ ....

....

....

....

ವಿಳಾಸ
ಡಾ. ಟಿ. ಎಸ್. ಪ್ರಕಾಶ್ ಕಮ್ಮರಡಿ
ಪತ್ರ ಪ್ರಕಾಶಕ ಮತ್ತು
ಗೌರವ ಸಂಪಾದಕ 'ಹಿತ್ತಲಗಿಡ'
ಕೃಷಿ ಅರ್ಥಶಾಸ್ತ್ರ ವಿಭಾಗ
ಕೃಷಿ ವಿಶ್ವವಿದ್ಯಾನಿಲಯ, ಜಿ.ಕೆ.ವಿ.ಕೆ.
ಬೆಂಗಳೂರು - 560 065
Ph: 080-23620025
email: prakashtnk@yahoo.com